ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಪಿ. ಶೀಲಾಮಣಿ ಪಾಕ್ಷಿಕ ಪತ್ರಿಕೆ

ರಿ.ನಂ. ಕೆ.ಆರ್.ಎನ್. ಸಂಪುಟ : 1 ಸಂಚಿಕೆ : 1 ಮಾರ್ಚ್ 31, ಏಪ್ರಿಲ್ 14–1997 ಪುಟಗಳು : 22 ರೂ. 5.



ನಮ್ಮ ಜನಾಂಗದ ಅರೆಭಾಷಿಕರ ವಿಭಾಗದೊಂದಿಗೆ ಪ್ರಪ್ರಥಮ ಪಾಕ್ಷಿಕ ಪತ್ರಿಕೆಯಾದ

ಕೊಡಗು ಸಂಗಾತಿಗೆ

ಯುವ ಶಕ್ತಿಯನ್ನು ಸಂಘಟಿಸಿ, ಐಕ್ಯತೆ ಮತ್ತು ಸಾಧನೆ ಯಾವುದೇ ಒಂದು ಜನಾಂಗದ

ಹಾಗೂ ದೇಶದ ಪ್ರಗತಿ ಎನ್ನುವ ನಿಮ್ಮ ಧ್ವನಿಗೆ ನಮ್ಮ ವೈಯಕ್ತಿಕ

ಹಾರ್ದಿಕ ಶುಭಾಶಯಗಳು....

ಯಿಂದ :

ಶ್ರೀ ಪೈಕೇರ ಅಪ್ಪಯ್ಯ ಅನಂತರಾವ್,
ಕಾಫಿ ಪ್ಲಾಂಟರ್, ಪಾಲಿಬೆಟ್ಟ.

ಮತ್ತು

ಶ್ರೀಮತಿ ಚಿತ್ರಲೇಖಾ ಅನಂತ್‌ರಾವ್

ಸಂಜಯ್ ಅನಂತ್‌ರಾವ್

ಸ್ಮಾರಕ್ ಅನಂತ್‌ರಾವ್

ಪಾಲಿಬೆಟ್ಟ, ಕೊಡಗು ಜಿಲ್ಲೆ – 571 215.

ದೂರವಾಣಿ : 08274/51371.

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟಡ ಪಿ. ಶೀಲಾಮಣಿ

ಉಪ ಸಂಪಾದಕ :
ಕಟ್ರತನ ಸಿ. ಜಯರಾಂ

ಸಹ ಸಂಪಾದಕ :
ಹುಲಿಮನೆ ಓ. ರಮೇಶ್

ಪ್ರಸಾರ ವ್ಯವಸ್ಥಾಪಕ :
ಪಟ್ಟಡ ಎಲ್. ಶಿವಕುಮಾರ್

ಕಛೇರಿ ನಿರ್ವಹಣೆ :
ಪಟ್ಟಡ ಪಿ. ದೀಪಕ್
ಹೊಸೊಕ್ಲು ಹರಿಣಿ ಬೆಳ್ಯಪ್ಪ

ಮುದ್ರಣ :
ಎಂ.ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,
ವಿನಾಯಕನಗರ, ಮೈಸೂರು-12

ಗೌರವ ವ್ಯವಸ್ಥಾಪಕ :
ಪಟ್ಟಡ ಎಂ. ಪ್ರಭಾಕರ್

ಜಾಹಿರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ
ನಂ. 322, ಬೋಗಾದಿ ಸರ್ಕಲ್,
ಹಿನಕಲ್ ಪೋಸ್ಟ್, ಮೈಸೂರು–17

ಮುನ್ನೋಟ

ಪುಟಗಳು

- ಸಂಪಾದಕೀಯ 2
- ಚಿಹ್ನೆಯ ಬಗ್ಗೆ ನಿಮಗೆಷ್ಟು ಗೊತ್ತು ? 4
- ಸಂದರ್ಶನ : ಸಮಾಜ ಸೇವಾ ದುರೀಣ - ಶ್ರೀ ತೋಟಂಬೈಲು ಮಾದಪ್ಪ ನಾಣಯ್ಯ 5
- ಜಗನ್ಮಾತೆ ಶ್ರೀ ಕಾವೇರಿ - ಕಿರು ಪರಿಚಯ 7
- ಸಮಗ್ರ ಅಭಿವೃದ್ಧಿಯಲ್ಲಿ ತಲಕಾವೇರಿ, ಭಾಗಮಂಡಲ 9
- ಸೈನಿಕ ನಗರ – ಒಂದು ಪಕ್ಷಿ ನೋಟ 10
- ಕಿತ್ತಳೆ ನಾಡಿನ ಕನಸುಗಾರ – ಪಟ್ಟಡ ಮುತ್ತಣ್ಣ ಪ್ರಭಾಕರ 11
- ಪ್ರಗತಿ ಪಥದತ್ತ ಯುವಶಕ್ತಿ ಸಾಗಲಿ 12
- ಪಂಚಲಿಂಗಗಳ ತಾಣ – ಆದಿಚುಂಚನಗಿರಿ ಕ್ಷೇತ್ರ 13

ಅರೆಭಾಷಿಕ ವಿಭಾಗ :

- ಕೊಡಗ್‌ನ ಕ್ರಾಂತಿವೀರ – ಸುಭೆದಾರ್ ಗುಡ್ಡೆಮನೆ ಅಪ್ಪಯ್ಯ ಗೌಡ್ರು 15
- ಚೆನ್ನಿ ಗೂಡೆ – ಹಾಸ್ಯ ಲೇಖನ 17
- "ನಂಗೇಕೆ ಈ ಕರೆ" - ಕಾವ್ಯ 18

ಸಂಪಾದಕೀಯ

ಕೊಡಗು ಮತ್ತು ಕನ್ನಡ ಜಿಲ್ಲೆ ಗೌಡರ ಬಗ್ಗೆ—

ಗೌಡ ಅಂದರೆ ಯಾರು ? ಗೌಡ ಎಂದರೆ ಊರಿಗೆ ಯಜಮಾನ ಅಥವಾ ಮುಖ್ಯಸ್ಥನಾಗುತ್ತಾನೆ ಅಥವಾ ಹತ್ತು ಜನರನ್ನು ಒಂದೆಡೆ ಸೇರಿಸಿ ಸಂಘಟಿಸಿ ಅವರ ಮುಂಚೂಣಿಯಲ್ಲಿರುವ ವ್ಯಕ್ತಿಯೇ ಗೌಡನೆನಿಸಿಕೊಳ್ಳುತ್ತಾನೆ. ಈ ಗೌಡರ ಬಗ್ಗೆ ಸುಮಾರಾಗಿ ನಾಲ್ಕನೇ ಶತಮಾನದಿಂದೀಚೆಗೆ ಚರಿತ್ರೆಯಲ್ಲಿ ಅಲ್ಲಲ್ಲಿ ಗೌಡನೆನ್ನುವ ಪದವು ಗೋಚರಿಸುತ್ತದೆ. ಈಗಿನ ಪಶ್ಚಿಮ ಬಂಗಾಳದಲ್ಲಿ ಗೌಡ ದೇಶವೇ ಇದ್ದು ಭಾರತದ ಪೂರ್ವ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ಪಸರಿಸಿದ ವಿವರಗಳು ಸಿಗುತ್ತವೆ. ಗೌಡರು ಅಂದರೆ ಗಾಮುಂಡ, ಗಾವುಂಡ, ಗಾವುಡ, ಗವುಡ, ಗಉಡ, ಗಾವೂಂಡ, ಗೌಡಿ, ಗವೂಂಡಿ, ಗವೂಂಡರ್, ಹಾಲಕ್ಕಿ ಒಕ್ಕಲು ಮಕ್ಕಳು, ಹಾಲು ಮತ, ಯಾದವ, ಹೆಂಲ್ಲಿ ಗೌಳಿ, ಗಂಗಡಿಕಾರ, ಕುಂಚಟಿಗ, ಮರಸ್ಸು, ನಾಮದಾರಿ, ದಾಸ ಒಕ್ಕಲು, ಗೋಪಾಲಕರು, ಗೊಲ್ಲರು, ಯಾದವರು, ಒಕ್ಕಲಿಗರು, ಕುರುಬ ಗೌಡರು, ಲಿಂಗಾಯಿತ ಗೌಡರು, ಹದಿನೆಂಟು ಉಪಗೌಡರು, ರೆಡ್ಡಿಗಳು, ನಾಯರ್, ಪಿಳ್ಳೆಗಳು, ಅರೆಭಾಷೆ ಗೌಡರು, ತುಳುಗೌಡರು ಹೀಗೆ ಸುಮಾರಾಗಿ 60ಕ್ಕಿಂತ ಹೆಚ್ಚು ಉಪ ಪಂಗಡದವರು ಸಿಗುತ್ತಾರೆ.

ಗೌಡನಾಗಿ ಭಾರತೀಯ ಪ್ರದೇಶಗಳಾದ ಕರ್ನಾಟಕ, ತಮಿಳುನಾಡು, ಒರಿಸ್ಸಾ, ಮಧ್ಯಪ್ರದೇಶ, ಬಂಗಾಳ ಪ್ರಾಂತ್ಯಗಳು, ಬಿಹಾರ್‌ನಲ್ಲಿ ಈಗಲೂ ಆ ಹೆಸರಿನಿಂದಲೇ ಕರೆಯಲ್ಪಡುತ್ತಾನೆ. ಅಂತಹ ನಾಮ ಪದದಲ್ಲಿ ಕೊಡಗು ಮತ್ತು ಕನ್ನಡ ಜಿಲ್ಲೆಯ ಗೌಡರ ನಾಮ ದೇಯವು ಒಂದು. ಈ ಗೌಡರು ಕೊಡಗಿಗೆ ಮತ್ತು ಕನ್ನಡ ಜಿಲ್ಲೆಗೆ ಹೇಗೆ ಬಂದರೆಂಬುದನ್ನು ನಾವುಗಳು ಮುಖ್ಯವಾಗಿ ಬೃಹತ್ ಗ್ರಂಥದ ಮೂಲಕ ತಿಳಿಯಬೇಕು. ಇವರ ಬಗ್ಗೆ ಅಧ್ಯಯನ ಮತ್ತು ಚಿಂತನೆ ಆಗಬೇಕು.

ದ್ವಾಪರ ಯುಗದ ಮಹಾಭಾರತದ ಯುದ್ಧದ ನಂತರ ಕ್ರಮೇಣ ಉತ್ತರ ಭಾರತದ ಬಿಹಾರ, ಬಂಗಾಳ, ಒರಿಸ್ಸಾ, ಮಧ್ಯ ಭಾರತ ವಿಜಯನಗರ ಸಾಮ್ರಾಜ್ಯಕ್ಕಾಗಿ ಗೋವ ತೀರಕ್ಕಾಗಿ ಕನ್ನಡ ಜಿಲ್ಲೆಗೆ ಬಂದು ನೆಲೆಸಿದ್ದು ಕ್ರಿ. ಶ. 1800 ರ ಸುಮಾರಿಗೆ ಒಡೆಯರ ಇತಿಹಾಸದಲ್ಲಿ ಕಂಡುಬರುತ್ತದೆ. ಇಂದು ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿರುವರು.

ಆದರೆ ಕೊಡಗನ್ನು ಕ್ರಿ.ಶ. 1300ರಷ್ಟು ಹಿಂದೆಯೇ ಕರ್ಣೇಂಬು ಬಾಹು ಅನ್ನುವ ಗೌಡರ ವೀರಯೋಧನೊಬ್ಬ ಪಾಳೇಗಾರನಾಗಿ [ಕೊಡಗಿನ (ತಾವುನಾಡ್, ಬೇಂಗ್‌ನಾಡ್, ಕುಯ್ಯಂಗೇರಿನಾಡ್ ಮತ್ತು ಪಾಲೂರನ್ನು ಆಳಿದ ಸಂಗತಿ ಚರಿತ್ರಾರ್ಹ.

1834ರಲ್ಲಿ ಅಂದಿನ ಹಲವು ಕುತಂತ್ರಿಗಳಿಂದ ಕೊಡಗು ಬ್ರಿಟೀಷರ ವಶವಾಗಲು ನೆರವಾಯಿತು. ನಂತರ 1837ರಲ್ಲಿ ಕೊಡಗಿನ ಸುಪುತ್ರ ಧೀರ, ವೀರ, ಸೇನಾನಿ ಕೊಡಗು ಗೌಡ ಬಲದ ಸೇನಾ ನಾಯಕನಾಗಿ ಅದೇ ವರ್ಷದ ಅಕ್ಟೋಬರ್ 31ನೇ ದಿನಾಂಕ ಈಗಿನ ಕೋಟೆಯ ಆವರಣದಲ್ಲಿ ಬ್ರಿಟೀಷರಿಂದ ಗಲ್ಲುಶಿಕ್ಷೆ ಪಡೆದು ಹುತಾತ್ಮನಾದನೆಂದು ಚರಿತ್ರೆ ಹೇಳುತ್ತದೆ. ಅಂದು ತುಳಿಯಲ್ಪಟ್ಟ ಈ ಗೌಡರು ಚೇತರಿಸಿಕೊಳ್ಳದೆ ಇಂದು ನಿಧಾನವಾಗಿ ಮುಂದುವರಿಯುತ್ತಿರುವರು. 1956ರಲ್ಲಿ ವಿಶಾಲ ಕರ್ನಾಟಕದ ಜೊತೆ ಶಾಮೀಲಾದ ನಂತರ ಈ ನಮ್ಮ ಗೌಡರು ಪ್ರಗತಿ ಪಥದಲ್ಲಿ ನಡೆಯುತ್ತಿದ್ದು ಹಾಗೂ ತನ್ನ ಕೀಳರಿಮೆಯನ್ನು ಬಿಟ್ಟು ಧೈರ್ಯದಿಂದ ನಿಲ್ಲುವಂತವರಾಗಿದ್ದಾರೆ. ಇದು ಸಂತಸದ ಬೆಳವಣಿಗೆ. ಈ 150 ವರ್ಷಗಳಲ್ಲಿ ಈ ಗೌಡ ಹೇಗೆ ಬೆಳೆದು ಬಾಳಿದ ಎಂಬ ಅಂಶವನ್ನು ನಾವಿಂದು ತಿಳಿಯಬೇಕಿದೆ. ಅಂತೆಯೇ ಮುಂದುವರಿಯಬೇಕು. ಇಂದು ನಮ್ಮ ಯುವ ಪೀಳಿಗೆಯು ತಮ್ಮ ತಮ್ಮ ಪದ್ಧತಿ ಆಚಾರ, ವಿಚಾರ, ಕುಲಾಚಾರ, ಕಂದಾಚಾರ, ಕಟ್ಟುಪಾಡುಗಳನ್ನು ನಿರ್ಲಕ್ಷತನದಿಂದ ಕಾಣುತ್ತಿರುವ ಈ ದಿನಗಳಲ್ಲಿ ಮರೆಯದೆ ಅವುಗಳನ್ನು ಪುನರ್‌ಜೀವನಗೊಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವೂ ಹೌದು. ಹಾಗೆಂದು ನಮಗೊಂದು ಸಂಘಟನೆ ತೀರ ಅಗತ್ಯ. ನಮಗೊಂದು ಚಿಹ್ನೆಯ ಬಳಕೆಯು ಅತ್ಯಗತ್ಯ. ನಾವೆಲ್ಲರೂ ಒಂದೇ ಸೂರಿನಡಿಯಲ್ಲಿ ಬಾಳಬೇಕಾದುದು ಅತೀ ಮುಖ್ಯ. ಆದುದರಿಂದ ಇಂದೇ ಅಡಿಪಾಯ ಹಾಕೋಣ.

ಅಂತೆಯೇ ಯಾವ ರೀತಿಯಲ್ಲಿ ಮುನ್ನೆಡೆಸಿಕೊಂಡು ಹೋಗಬೇಕು ಅನ್ನುವ ವಿಚಾರದಲ್ಲಿ ಈಗಿರುವ ಅಭಿವೃದ್ಧಿ ಸಮಿತಿಯು ತೀವ್ರತರ ಗಮನ ಹರಿಸಿ ಚಟುವಟಿಕೆ ಭರಿತವಾಗಿ ಕಾರ್ಯಕ್ರಮ ಹಮ್ಮಿಕೊಂಡು ತನ್ನ ಚಟುವಟಿಕೆಯನ್ನು ಚುರುಕುಗೊಳಿಸಬೇಕು. ನಮ್ಮ ಉತ್ಸಾಹಿ ಯುವ ಪೀಳಿಗೆಯು ಮುಂದೆ ಬರಬೇಕು.

ಇದರ ಆಶ್ರಯದಲ್ಲಿ ನಾವೆಲ್ಲರು ನಮ್ಮ ಕೊಡಗಿನ ಹಬ್ಬಗಳಾದ ಹುತ್ತರಿ, ಕೈಲು ಮುಹೂರ್ತ, ಊರೋರ್ಮೆ ಎನ್ನುತ್ತ ಪ್ರತಿಯೊಂದು ಗ್ರಾಮಗಳ ಅಂತರದಲ್ಲಿ ಮೆರೆಯಬೇಕು. ನಮ್ಮ ದೇವಾನುದೇವತೆಗಳಾದ ಶ್ರೀ ತಿರುಮಲೇಶ್ವರ ದರ್ಶನ, ಶೃಂಗೇರಿ ಶಾರದಾಂಬೆ ದರ್ಶನ, ಕಾವೇರಿ ದರ್ಶನ,

ಊರಿನ ಹಬ್ಬ ಹರಿದಿನಗಳು, ಆಟಪಾಟಗಳು, ಕೋಲಾಟ, ಬೊಳಕಾಟ, ಬಯಲಾಟ ಇನ್ನಿತರ ಯಾವುದೇ ಚಟುವಟಿಕೆಗಳಲ್ಲಿ ತಪ್ಪದೆ ಭಾಗವಹಿಸಿ ನಡೆಸಿಕೊಂಡು ಬರಬೇಕು. ಇದಕ್ಕಾಗಿ ಆಯಾ ಊರಿನ ಹಿರಿಯರ ಆಶೀರ್ವಾದವು ಇರಬೇಕು. ಕಿರಿಯವರಿಗೆ ಸೂಕ್ತ ಸಲಹೆ ಇತ್ಯಾದಿ ನೀಡಿ ಮುನ್ನಡೆಸಬೇಕು.

ಮಡಿಕೇರಿ ನಗರದಲ್ಲಿರುವ ನಮ್ಮ ವಿದ್ಯಾ ಸಂಘದ ನಿವೇಶನದ ಒಂದು ಬದಿಯಲ್ಲಿ ಕುಲದೈವ ಶ್ರೀ ವೆಂಕಟರಮಣ ಸ್ವಾಮಿಯ ಶಾಶ್ವತ ಚಿಕ್ಕದೇವಾಲಯವನ್ನು ಪ್ರತಿಸ್ಥಾಪಿಸಬೇಕು. ಪೂಜೆ ಪುರಸ್ಕಾರಗಳು ಸಮಾಜವವತಿಯಿಂದ ಆಗುತ್ತಿರಲಿ. ಒಂದುಬದಿಯಲ್ಲಿ ವಿದ್ಯಾದೇವತೆ ಶಾರದಾಂಬೆಗೂ ಸ್ಥಾನವಿರಲಿ. ಅಂದರೆ ಸಬ್ಬಮ್ಮ, ಸುಬ್ಬಮ್ಮ ದೇವತೆಗಳು. ವಧುವರರು ಇಲ್ಲಿ ಆಶೀರ್ವಾದ ಪಡೆಯಲಿ. ಮದ್ಯ ಮಾಂಸಗಳು, ನಿಶಾಸೇವನೆಯು ಕುಂಠಿತವಾಗಿ ಅದನ್ನು ದ್ವೇಷಿಸಿ ಕಾಲಕ್ರಮೇಣ ತ್ಯಜಿಸುವಂತಾಗಬೇಕು. ಅದೇ ನಮ್ಮ ಜನಾಂಗಕ್ಕೆ ಶ್ರೇಯಸ್ಸು. ಮೂಲತವಾಗಿ ನಾವೆಲ್ಲರು ಸಸ್ಯಹಾರಿಗಳೇ ತಾನೇ?

ಪ್ರತಿಯೊಬ್ಬ ಗೌಡರ ಐನ್ ಮನೆಯಲ್ಲಿ ಕುಲದೈವ ತಿಮ್ಮಪ್ಪನ ಹರಿಸೇವೆಯನ್ನು ಮಾಡುವುದು ರೂಢಿ. ಈಗೀಗ ಅವುಗಳೆಲ್ಲವು ಹಲವಾರು ವರ್ಷಗಳಿಗೊಮ್ಮೆಯು ಹಲವು ಅನಿವಾರ್ಯ ಕಾರಣಗಳಿಂದ ಮಾಡದೆ ಇರುವ ಪ್ರಸಂಗಗಳು ಇದ್ದು ಇಂತಹ ಸಂಭರ್ಧದಲ್ಲಿ ನಮ್ಮ ಸಮಾಜದ ವತಿಯಿಂದ ಹರಿಸೇವೆಯನ್ನು ಸಾಮೂಹಿಕವಾಗಿ ನಮ್ಮ ಸಮುದಾಯ ಭವನಗಳಲ್ಲಿ ನಡೆಸುವಂತಿದ್ದರೆ ತುಂಬಾ ಯಶಸ್ವಿಯಾಗುವುದು. ದೇವರ ಕಾರ್ಯವನ್ನು ಯಾರು ಎಲ್ಲಿ ಬೇಕಾದರು ಮಾಡಬಹುದು. ಏಳುಮಲೆ ಎಪ್ಪತ್ತು ಗಿರಿವಾಸಿ ಶ್ರೀಮನ್ನಾರಾಯಣ ತಿರುಪತಿ ತಿಮ್ಮಪ್ಪನ ದರ್ಶನವನ್ನು ಜೀವನದಲ್ಲಿ ಒಮ್ಮೆಯಾದರು ಪಡೆದು ದೈವ ಕೃಪೆಗೆ ಪ್ರತಿ ಗೌಡರು ಪಾತ್ರರಾಗಬೇಕೆಂಬದು ಮುಖ್ಯ.

ಶೃಂಗೇರಿ ಶಾರದಾಂಬೆಯ ದರ್ಶನವನ್ನು ಪ್ರತಿಯೋರ್ವ ಗೌಡ, ಗೌಡವತಿಯರು ತಪ್ಪದೇ ಜೀವನದಲ್ಲಿ ಒಮ್ಮೆಯಾದರು ದರ್ಶನ ಮಾಡಿ ಬರುವುದರಿಂದ ಗುರುಕೃಪೆಯಿಲ್ಲದ ಇಂದಿನ ದಿನದಲ್ಲಿ ಗುರುಭಾಗ್ಯ ಲಭಿಸಿ, ವಿಶಾಲ ದೃಷ್ಟಿಯಿಂದ ಮುಂದುವರಿದು, ನಮ್ಮವರ ವಿದ್ಯಾರ್ಜನೆಗೆ ಅನಾನುಕೂಲವಿರುವ ಈ ತೊಡಕಿನ ಪರಿಹಾರಕ್ಕೆ ನಾಂದಿಯಾಗಬಹುದೇನೋ?

ಪಟ್ಟಡ ಪ್ರಭಾಕರ ವಿರಚಿತ ನನ್ನ ಕನಸಿನ ಮಡಿಕೇರಿ ಕಿರುಹೊತ್ತಿಗೆಯಲ್ಲಿ ತಿಳಿಸಿರುವಂತೆ ಕೊಡಗಿನ ಮಡಿಕೇರಿ ಸಮೀಪ ಮದೆನಾಡು, ಅವಂದೂರು, ಬೆಟ್ಟತ್ತೂರು ಗಡಿಯಲ್ಲಿರುವ ದೊಡ್ಡ "ಝರಿಪಾರೆ" ಯನ್ನು ಶ್ರೀ ವೆಂಕಟರಮಣನ ಮೂರ್ತಿ ಕಡೆದು ನೆಲೆಯಾಗಿ ಮಾರ್ಪಡಿಸಿ ಪ್ರವಾಸೋಧ್ಯಮ ಬೀಡಾಗಿ ಪರಿವರ್ತಿಸುವ ಅವರ ಚಿಂತನೆಗೆ ಇಂಬು ಕೊಟ್ಟರೆ ಅದರಿಂದ ದೇಶಕ್ಕೆ ಸುಭಿಕ್ಷೆಯು ಸುಖಶಾಂತಿ ನೆಲೆಸುವುದೆಂಬ ಅವರ ವಾದಕ್ಕೆ ಚಾಲನೆ ಸಿಕ್ಕುವಂತಾಗಲಿ. ಕೊಡಗಿನ ಗೌಡ ಸಮಾಜ, ಅಭಿವೃದ್ಧಿ ಸಂಘವು ಇತ್ತ ಗಮನ ಹರಿಸುವರೇ ? ಇವರ ಈ ಪ್ರಯತ್ನಕ್ಕೆ ಗೌಡ ಸಮುದಾಯದ ಅಭಿವೃದ್ಧಿಯನ್ನು ಮೂಲತಃ ದೇವರ ಕೃಪೆಯಿಂದ ಕಾಣಬಹುದಾದರೆ ಅವರ ಕೃತಿಯಲ್ಲಿರುವ ವಿಚಾರಗಳನ್ನು ಕಾರ್ಯಗತಗೊಳಿಸುವತ್ತ ಸಮಾಜ ಬಾಂಧವರು ಗಮನ ಹರಿಸಿ ದೇಶೋದ್ಧಾರಕ ಕಾರ್ಯದಲ್ಲಿ ತೊಡಗುವುದು ಸೂಕ್ತ ಅಲ್ಲವೇ.

ನಮ್ಮದೇ ಪತ್ರಿಕೆ ವಿಭಾಗ ಇಂದಿನ ಪರಿಸರಕ್ಕೆ ಬೇಕೇಬೇಕು. ಪ್ರತಿಯೋರ್ವರ ಅಭಿಪ್ರಾಯನ್ನು ಅದರಲ್ಲಿ ಪ್ರತಿಬಿಂಬಿಸಬೇಕು. ಈ ದಿಸೆಯಲ್ಲಿ ಕನ್ನಡ ಅಥವಾ ಅರೆಭಾಷೆಯಲ್ಲಿಯೇ ಒಂದು ಪತ್ರಿಕೆ ಹೊರಬರುವುದು ಸಮಂಜಸವಾಗಿದೆ ಈಗಿನ ಪರಿಸ್ಥಿತಿಗೆ. ಅದಕ್ಕಾಗಿ ಪ್ರಯತ್ನವಿರಲಿ. ಕನ್ನಡ, ಗೌಡ ಕನ್ನಡ ಪದಗಳ ಸಂಗ್ರಹಣೆಯು ನಿಘಂಟಿನ ರೂಪದಲ್ಲಿ ಬರುತ್ತಿದೆ. ಉತ್ತಮ ಗೌಡಕನ್ನಡ ಭಾಷಾ ಕೃತಿಗೆ ಬಹುಮಾನ ಕೊಟ್ಟು ಪ್ರೋತ್ಸಾಹಿಸೋಣ. ನಮ್ಮದೇ ಸ್ವಂತದ್ದೆ ಆದ ಅರೆಭಾಷಾ ಅಥವಾ ಸಾಹಿತ್ಯ ಅಕಾಡೆಮಿ ತರಹ ರಚನೆಯಾಗಲಿ. ಉತ್ತಮವಾದ ಸಂಪದ್ಬರಿತ ಸತ್ವವುಳ್ಳ ಭಾಷೆಯೇ ಅರೆಭಾಷೆಯಾಗಿದೆ.

ಮಡಿಕೇರಿ ಮತ್ತು ಸುಳ್ಯದ ವಿದ್ಯಾಸಂಘದ ಆಶ್ರಯದಲ್ಲಿ ಪುಸ್ತಕ ಭಂಡಾರವಿರುವುದು ನಮ್ಮ ಜನಾಂಗದ ಹಿರಿಕಿರಿಯರಿಗೆ ಅನುಕೂಲವಾಗುವಂತೆ ಮಾಹಿತಿ ಮತ್ತು ಜ್ಞಾನವನ್ನು ನೀಡುವ ಜ್ಞಾನಕೇಂದ್ರಗಳು ಅವಶ್ಯವಾಗಿ ಆಗಲಿ. ಇದರಡಿಯಲ್ಲಿ ಕೊಡಗು ಸಂಗಾತಿ ಪಾಕ್ಷಿಕ ತಮ್ಮ ಬೆನ್ನ ಹಿಂದೆ ನಿಂತು ಸಹಕರಿಸಲಿದೆ. ಜೈ ಕಾವೇರಿ...

ನಮ್ಮ ಎಲ್ಲಾ ಮಾನ್ಯ ಹಿತೈಷಿ ಓದುಗರಿಗೆ,

ಚಂದಾದಾರರಿಗೆ, ಜಾಹಿರಾತುದಾರರಿಗೆ,


ಹಾಗೂ ಸಮಸ್ತ ಕನ್ನಡಕುಲಕೋಟಿಗೂ,


ಕೊಡಗು ಸಂಗಾತಿಯ

ಯುಗಾದಿ ಶುಭಾಶಯಗಳು....

ಸಂಘಟನೆಯ ಸಮೃದ್ಧಿಗಾಗಿ ! ಈ ನಮ್ಮ ಗುರುತು ನಿಮಗೆಷ್ಟು ಗೊತ್ತು ?







ಶ್ರೀ ವೆಂಕಟರಮಣ (ಕುಲಗುರು) :

ಶ್ರೀಶ್ರೀಶ್ರೀ ವೆಂಕಟರಮಣ ದೈವವು ಹೆಚ್ಚಿನ ಗೌಡ ಜನಾಂಗದವರೆಲ್ಲರ ಕುಲದೈವವಾಗಿರುವುದರ ಹಿನ್ನೆಲೆಯಲ್ಲಿ ಮತ್ತು ತಮ್ಮ ಪ್ರತಿಭೆಯನ್ನು ಗುರುತಿಸಿ ಯುವಶಕ್ತಿಯನ್ನು ಸಂಘಟಿಸಿ, ಐಕ್ಯತೆಯೇ ದೇಶದ ಪ್ರಗತಿಗೆ ನಾಂದಿಯಾಗುವುದಕ್ಕೆ ಮುಖ್ಯ ಪ್ರೇರಣೆಯಾಗಲಿ ಎನ್ನುವ ಧ್ಯೇಯದೊಂದಿಗೆ ಈ ಗುರುತಿನ ಸ್ವೀಕರಣೆ.

ಕೊಡಗು ಸಂಗಾತಿ

ಕೊಂಡು ಓದಿರಿ

ಒಡಿಕತ್ತಿ (ಜಮ್ಮ) : ಕತ್ತಿ ಎಲ್ಲರಿಗೂ ಬೇಕಾಗಿದೆ. ಆದರೆ ಈ ಒಡಿಕತ್ತಿ ಎಲ್ಲಾ ಕತ್ತಿಯಂತಲ್ಲ. ಈ ಕತ್ತಿಯನ್ನು ಕೊಡಗಿನ ನಿವಾಸಿಗಳಿಗೆ ಅಂದಿನ ಕೊಡಗು ರಾಜ ಯುದ್ಧದಲ್ಲಿ ಸಹಕರಿಸಿದ ನೆನಪಿಗೂ, ಬಹುಮಾನ, ಉಡುಗೊರೆ ರೂಪದಲ್ಲಿಯೂ ಹಾಗೂ ಭೂಮಿಯನ್ನು ಜಮ್ಮವಾಗಿ ಕೊಡುವಾಗ ಕೊಡುತ್ತಿದ್ದ ರಾಜನ ಪಾಳೆಯದಲ್ಲಿ ಒಡಿಕತ್ತಿಯು ದಳವೊಂದಿತ್ತು. ಈ ಒಡಿಕತ್ತಿಯೇ ಅಂದಿನ ಕಾಲದಲ್ಲಿ ಪ್ರಮುಖ ಆಯುಧವಾಗಿ ಬಳಸಲ್ಪಟ್ಟು, ಜಯಿಸಿ, ಸಾಧಿಸಿದೆಷ್ಟೋ? ಜಮ್ಮಗಾರನ ಪ್ರತೀಕವು ಸಹ ಹೌದಾದ್ದರಿಂದ ಕತ್ತಿ ಈ ಗುರುತಿನ ಸ್ವೀಕರಣೆ.

ಕೋವಿ (ಉಂಬಳಿ) : ಕೇಪಿನ ತೋಟದ ಕೋವಿ, ಒಂಟಿ ಕೊಳ ಕೋವಿ, ಜೋಡು ಕೊಳ ಕೋವಿ, ಹದಿನಾರ್ ಬೋರ್ ಕೋವಿ ಅಂತ ರಾಜರಕಾಲದಲ್ಲಿಯೂ ಮತ್ತು 1837 "ಅಮರ ಸುಳ್ಯ" ಕಾಟಕಾಯಿ ಸಮಯದಲ್ಲಿ ಸಹ ಇವು ಹೇರಳವಾಗಿ ಬಳಸಲ್ಪಟ್ಟವು. ಆಗ ಉಂಬಳಿ ಭೂಮಿ ಇತ್ಯಾದಿ ಕೊಡಲ್ಪಟ್ಟದ್ದರ ಸಂಕೇತವಾಗಿ ಈ ಕೋವಿ ಗುರತಿನ ಸ್ವೀಕರಣೆ.

— ಕೊಡಗು ಸಂಗಾತಿ ಪತ್ರಿಕೆಯು ದೊರೆಯುವ ಸ್ಥಳಗಳು —

ಬೆಂಗಳೂರು : ಗೌಡ ಸಮಾಜ, ಬಿನ್ನಿ ಮಿಲ್ ಹಿಂಭಾಗ.
ಮಂಡ್ಯ : ರಾಧ ಎಂಪೋರಿಯಂ, ವಿ. ವಿ. ರಸ್ತೆ,
ಮೈಸೂರು : ಕೊಡಗು ಗೌಡ ವಿದ್ಯಾರ್ಥಿನಿಲಯ, ಜಯಲಕ್ಷ್ಮಿಪುರಂ.
ಪಿ.ಆರ್. ಆನಂದ್ ಫ್ಯಾನ್ಸಿ ಸ್ಟೋರ್, ನಂ. 615, ಷಾಪ್ ನಂ. 8, ಹೆಚ್.ಟಿ. ಲೈನ್ ಡಬ್ಬಲ್ ರೋಡ್, ಹೆಬ್ಬಾಳ್ 2ನೇ ಹಂತ, ಮೈಸೂರು.
ಕೊಡಗು :
1. **ಮಡಿಕೇರಿ** ಕೆಳಗಿನ ಗೌಡ ಸಮಾಜ.
2. **ಪ್ರಕಾಶ್ ಬುಕ್ ಸ್ಟಾಲ್, ಕುಶಾಲನಗರ.**
3. **ನರೇಂದ್ರ,** ಶ್ರೀನಿವಾಸ ನ್ಯೂಸ್ ಏಜೆನ್ಸಿ, ಬಸ್ಟ್ಯಾಂಡ್, ಸಿದ್ದಾಪುರ.
4. **ಕೆ.ಆರ್. ಅನಂತ್‌ಕುಮಾರ್,** ಗಾಳಿಬೀಡು.
5. **ಪಿ.ಬಿ. ಸುನಿಲ್,** ಜನರಲ್ ಸ್ಟೋರ್, ಭಾಗಮಂಡಲ.
6. **ಪಟ್ಟಡ ಸುಗುಣಕುಮಾರ್,** ಪತ್ರಿಕಾ ಪ್ರತಿನಿಧಿ, ಮೂರ್ನಾಡ್.

ಸುಳ್ಯ : ರೀತು ಫ್ಯಾನ್ಸಿ ಸ್ಟೋರ್,

ಸಮಾಜ ಸೇವಾ ಧುರೀಣ – ತೋಟಂಬೈಲು ಮಾದಪ್ಪ ನಾಣಯ್ಯ

ಪ್ರಕೃತಿಯ ರಮ್ಯತಾಣವಾದ ಕೊಡಗು ಜಿಲ್ಲೆ ಕಾಫಿ, ಕಿತ್ತಳೆ, ಏಲಕ್ಕಿಗೆ ಹೆಸರಾಗಿರುವಂತೆಯೇ ದೇಶಪ್ರೇಮಿ, ವೀರಯೋಧರನ್ನು ರಾಷ್ಟ್ರಕ್ಕೆ ಸಮರ್ಪಿಸಿರುವ ಕೀರ್ತಿಯನ್ನು ಪಡೆದಿದೆ. ಕೊಡಗು ಜಿಲ್ಲೆಯಲ್ಲಿ ಸುಮಾರು ಒಂದುವರೆ ಲಕ್ಷದಷ್ಟಿರುವ ಗೌಡಜನಾಂಗ ಮುಖ್ಯ ವಾಹಿನಿಯಲ್ಲಿ ಒಂದಾಗಿ ಆ ಜಿಲ್ಲೆಯ ಸಂಪತ್ತು, ಸಮೃದ್ಧಿಗಾಗಿ ದುಡಿಯುತ್ತಿದೆ.

ಈ ಗೌಡ ಜನಾಂಗದಲ್ಲಿ ಅನೇಕ ಮಹನೀಯರು ಸಮಾಜಸೇವಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಸೇವಾ ಕಾರ್ಯದಲ್ಲಿ ನಿರತರಾಗಿರುವುದು ಶ್ಲಾಘನೀಯವಾದುದು. ಅಂತಹವರಲ್ಲಿ ತೋಟಂಬೈಲು ಮಾದಪ್ಪ ನಾಣಯ್ಯನವರು ಪ್ರಮುಖರಾಗಿದ್ದಾರೆ. ನಾಣಯ್ಯನವರ ತಂದೆ ಮಾದಪ್ಪನವರು ಆರಣ್ಯ ಇಲಾಖೆಯಲ್ಲಿ ರೇಂಜರ್ ಆಗಿದ್ದು ಸಿದ್ದಾಪುರ ಪ್ರೌಢಶಾಲೆಯ ಸ್ಥಾಪಕ ಅಧ್ಯಕ್ಷರಾಗಿದ್ದರು. ಸಿದ್ದಾಪುರ ಟೌನ್ ಪಂಚಾಯ್ತಿಗೆ ಎರಡು ಅವಧಿಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಸಿದ್ದಾಪುರ ಸಹಕಾರ ಸಂಘದ ಅಧ್ಯಕ್ಷರಾಗಿ ಕೂರ್ಗ್ ರೆಡ್‌ಕ್ರಾಸ್ ಸಂಸ್ಥೆಯಲ್ಲಿ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಧಾನಧರ್ಮ ಅವರಲ್ಲೂ ವಿಶೇಷವಾಗಿ ಬಡವರಿಗೆ ಸಹಾಯ ಹಸ್ತ ನೀಡುವುದರಲ್ಲಿ ಎತ್ತಿದ ಕೈಯಾಗಿದ್ದರು.

1938ರಲ್ಲಿ ಜನಿಸಿದ ತೋಟಂಬೈಲು ಮಾದಪ್ಪ ನಾಣಯ್ಯನವರು ಮೈಸೂರಿನ ರಾಮಕೃಷ್ಣಾಶ್ರಮದಲ್ಲಿ ಎಂಟನೇ ತರಗತಿಯವರೆಗೆ ವಿದ್ಯಾಭ್ಯಾಸ ನಡೆಸಿದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪಡೆದರು. ಕನ್ನಡದ ಹೆಸರಾಂತ ಸಾಹಿತಿಗಳಾದ ಜಿ. ಪಿ. ರಾಜರತ್ನಂ, ಎಸ್.ವಿ. ಪರಮೇಶ್ವರಭಟ್ಟರು ತಮ್ಮ ಗುರುಗಳಾಗಿದ್ದನ್ನು ನಾಣಯ್ಯನವರು ಗೌರವ ಅಭಿಮಾನದಿಂದ ಸ್ಮರಿಸಿಕೊಳ್ಳುತ್ತಾರೆ. ಹಾಕಿ ಇವರ ಮೆಚ್ಚಿನ ಆಟ. ಬೆಂಗಳೂರಿನ ಸರ್ಕಾರಿ ಲಾ ಕಾಲೇಜಿನಲ್ಲಿ ಅಭ್ಯಾಸ



ಶ್ರೀ ಟಿ. ಎಂ. ನಾಣಯ್ಯ

ಮಾಡುತ್ತಿದ್ದಾಗ ಹಾಕಿ ಕ್ಯಾಪ್ಟನ್ ಆಗಿದ್ದರು. ಹೆಸರಾಂತ ಹಿರಿಯ ವಕೀಲ ಎಸ್.ಜಿ. ಸುಂದರಸ್ವಾಮಿ ಅವರ ಕೈಕೆಳಗೆ ಅಭ್ಯಾಸಮಾಡಿದ್ದಾರೆ. ನಂತರ ಮಡಿಕೇರಿಯಲ್ಲಿ ತೋಟಂಬೈಲು ಕೆ. ಚೆಂಗಪ್ಪ ಇವರ ಬಳಿ ಪ್ರಾಕ್ಟೀಸ್ ಮಾಡಿದರು. ತಂದೆಯವರು ತೀರಿಕೊಂಡ ಬಳಿಕ ನ್ಯಾಯಾಂಗ ಕ್ಷೇತ್ರದಲ್ಲಿ ಮುಂದುವರಿಯಲಾಗಲಿಲ್ಲ.

ಕೊಡಗು ಗೌಡ ವಿದ್ಯಾಸಂಘದ ಸಂಸ್ಥಾಪಕ ಅಧ್ಯಕ್ಷರಾದ ಕುಶಾಲಪ್ಪನವರ ಮನೆತನದ ಕುಂಬುಗೌಡನ ಮುದ್ದಪ್ಪನವರ ಎರಡನೆಯ ಮಗಳು ಶ್ರೀಮತಿ ಶಾರದಮ್ಮನವರೊಡನೆ 1967 ರಲ್ಲಿ ನಾಣಯ್ಯನವರ ವಿವಾಹ ನೆರವೇರಿತು. ಶ್ರೀಮತಿ ಶಾರದಮ್ಮ ಪತಿಗೆ ತಕ್ಕ ಸಹಧರ್ಮಿಣಿಯಾಗಿ ಮನೆತನದ ಏಳಿಗೆಯಲ್ಲಿ ಕುಂಬುಜೀವನ ನಡೆಸುತ್ತಿದ್ದಾರೆ. ಶ್ರೀಮತಿ ಶಾರದಮ್ಮನವರು ಸಿದ್ದಾಪುರ ಲಯನ್ಸ್ ಕ್ಲಬ್‌ನ ಮಹಿಳಾ ವಿಭಾಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ನಾಣಯ್ಯ-ಶ್ರೀಮತಿ ಶಾರದಮ್ಮ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬರು ಮಗಳಿದ್ದಾರೆ. ಹಿರಿಯ ಮಗ ಡಾ॥ ದೀಪಕ್ ಡೆಂಟಲಿಸ್ಟ್ ಆಗಿ ಬೆಂಗಳೂರಿನಲ್ಲಿದ್ದಾರೆ. ಎರಡನೆ ಮಗ ದರ್ಶನ್ ಬಿ.ಎ. ಪದವಿ ಮುಗಿಸಿ ಕಂಪ್ಯೂಟರ್ ಟ್ರೈನಿಂಗ್ ಪಡೆಯುತ್ತಿದ್ದಾರೆ. ಮಗಳು ಶಿಲ್ಪ ಎಂ.ಎ. ಸೈಕಾಲಜಿ ಅಭ್ಯಾಸ ಮಾಡುತ್ತಿದ್ದಾರೆ. ಅವರು ಬಿ.ಎ.ಪದವಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಾಲ್ಕನೇ ರ್‍ಯಾಂಕ್ ಗಳಿಸಿ ಪ್ರತಿಭಾವಂತೆ ಎನಿಸಿಕೊಂಡಿದ್ದಾರೆ.

ತೋಟಂಬೈಲು ಮಾದಪ್ಪ ನಾಣಯ್ಯ ಅವರ ಅಣ್ಣ ಬೆಳ್ಳಿಯಪ್ಪ ಲಯನ್ ಡಿಸ್ಟ್ರಿಕ್ಟ್ ಗೌರ್ನರ್ ಆಗಿದ್ದರು. ಅವರ ತಮ್ಮ ಮುದ್ದಪ್ಪ ಕಣ್ಣಿನ ವಿಭಾಗದಲ್ಲಿ ಡಾಕ್ಟರಾಗಿದ್ದು ಸೌದಿಅರೆಭಿಯಾದಲ್ಲಿ ರಕ್ಷಣಾ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮತ್ತೊಬ್ಬ ತಮ್ಮ ಮೋಹನ್ ಇಂಜಿನಿಯರಿಂಗ್ ಪದವಿ ಪಡೆದಿದ್ದು ಪ್ರಸ್ತುತ ಎಸ್ಟೇಟ್‌ನ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ.

ನಾಣಯ್ಯನವರ ಸಮಾಜ ಸೇವಾಕ್ಷೇತ್ರ ಬಹುಮುಖವಾದದು. 1970 ರಿಂದ ಸಿದ್ದಾಪುರ ಪ್ರೌಢಶಾಲೆಯ ಆಡಳಿತ ಮಂಡ

ಶ್ರೀ ಶಿವಳ್ಳಿ ಕೆಂಪೇಗೌಡ ಸಂಗಾತಿಯ ಬರಹಗಾರರಲ್ಲಿ ಪ್ರಮುಖರು, ಮಂಡ್ಯದಲ್ಲಿ "ರೈತ ಜ್ಯೋತಿ" ಎಂಬ ಮಾಸಿಕ ಪತ್ರಿಕೆಯ ಸಂಪಾದಕರಾಗಿ ಹಲವು ವರ್ಷಗಳ ಸೇವೆಯೊಂದಿಗೆ ಅಪಾರ ಅನುಭವ ಹೊಂದ್ದಾರೆ. ಕೊಡಗಿನ ಪ್ರಮುಖರಲ್ಲಿ ಒಬ್ಬರಾದ ಶ್ರೀ ಟಿ. ಎಂ. ನಾಣಯ್ಯನವರೊಂದಿಗೆ ಕಲನಿಮಿಷಗಳ ಅರ್ಥವತ್ತಾದ ನೆನಪು ಮತ್ತು ನಡೆದು ಬಂದ ಹಾದಿಯನ್ನು ಸಂದರ್ಶನದ ಮೂಲಕ ತಮ್ಮ ಮುಂದಿಡುತ್ತಿದ್ದೇವೆ.

–ಸಂ.

ಳಿಯಲ್ಲಿ ಹನ್ನೆರಡು ವರ್ಷ ಉಪಾಧ್ಯಕ್ಷರಾಗಿದ್ದು 1982ರಿಂದ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ. ಈ ಶಾಲೆಯ ರಜತಮಹೋತ್ಸವ ಕಟ್ಟಡ ನಿರ್ಮಾಣವಾಗಿದ್ದು ರಜತ ಮಹೋತ್ಸವ ಸಮಾರಂಭದೊಡನೆ ಉದ್ಘಾಟನೆಯಾಗಬೇಕಿದೆ.

1976 ರಿಂದ 77ರವರೆಗೆ ಮೈಸೂರಿನ ಕೊಡಗು ಗೌಡ ವಿದ್ಯಾರ್ಥಿ ನಿಲಯದ ಖಜಾಂಚಿಯಾಗಿದ್ದರು. ಆ ಸಂದರ್ಭದಲ್ಲಿಯೇ ವಿದ್ಯಾರ್ಥಿಭವನ ನಿರ್ಮಾಣವಾಯಿತು. 1980 ರಿಂದ 88 ರವರೆಗೆ ಕಲ್ಯಾಣ ಮಂಟಪ ಕಟ್ಟಡ ಸಮಿತಿ ಅಧ್ಯಕ್ಷರಾಗಿದ್ದು ಇವರ ಅಧಿಕಾರಾವಧಿಯಲ್ಲಿಯೇ ಕಟ್ಟಡ ನಿರ್ಮಾಣವಾಯಿತು. ಜಿಲ್ಲೆಯ ಇತರ ಪಟ್ಟಣಗಳಲ್ಲಿ ಕಲ್ಯಾಣಭವನ ನಿರ್ಮಾಣವಾಗಲು ಇದು ಸ್ಫೂರ್ತಿ ನೀಡಿದೆ.

1985ರಲ್ಲಿ ಸುಳ್ಯದಲ್ಲಿ ಗೌಡಸಮ್ಮೇಳನ ನಡೆಯಿತು. ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮೀಜಿಯವರುಸಮ್ಮೇಳನ ಉದ್ಘಾಟನೆಯನ್ನು ನೆರವೇರಿಸಿದರು. ಆ ಸಂಧರ್ಭದಲ್ಲಿ ಉದಯವಾದ ದ. ಕ., ಕೊಡಗು ಗೌಡ ಅಭಿವೃದ್ಧಿ ಸಂಘದ ಉಪಾಧ್ಯಕ್ಷರಾಗಿ ನಾಣಯ್ಯನವರು ಸೇವೆಸಲ್ಲಿಸುತ್ತಿದ್ದಾರೆ. ಸಿದ್ದಾಪುರ ಲಯನ್ಸ್‌ಕ್ಲಬ್ ಅಧ್ಯಕ್ಷರಾಗಿ ಅವರು ಈ ಸಾಲಿಗೆ ಎರಡನೇ ಬಾರಿಗೆ ಆಯ್ಕೆಯಾಗಿದ್ದಾರೆ. 1981 ರಿಂದ 89 ರವರೆಗೆ ಲಯನ್ಸ್ ಕ್ಯಾಬಿನೆಟ್ ಸದಸ್ಯರಾಗಿದ್ದರು. ಇವರ ಸೇವೆಯನ್ನು ಗೌರವಿಸಿ ಲಯನ್ಸ್‌ಕ್ಲಬ್ ಹಲವಾರು ಪ್ರಶಸ್ತಿಗಳನ್ನು ನೀಡಿ ನಾಣಯ್ಯನವರನ್ನು ಗೌರವಿಸಿದೆ

ಲೋಕನಾಯಕ ಜಯಪ್ರಕಾಶ್‌ನಾರಾಯಣರ ಸಂಪೂರ್ಣ ಕ್ರಾಂತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ನಾಣಯ್ಯನವರು ಒಂದೆರೆಡು ವರ್ಷ ಕೊಡಗು ಜಿಲ್ಲಾ ಜನತಾ ಪಕ್ಷದ ಖಜಾಂಚಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಯಾವುದೇ ಸಮಾಜಸೇವೆ ಕ್ಷೇತ್ರಕ್ಕೆ ಕೈಹಾಕಿದರೂ ಅದರಲ್ಲಿ ಶ್ರದ್ಧೆಯಿಂದ ತಮ್ಮನ್ನು ತೊಡಗಿಸಿಕೊಂಡು ದುಡಿಯುವ ಮನೋಭಾವದ ನಾಣಯ್ಯನವರು ಸರಳ ಸೌಜನ್ಯ ವ್ಯಕ್ತಿ. ಯಾವುದೇ ಸಂಘ ಸಂಸ್ಥೆಯ ಪದವಿ, ಪುರಸ್ಕಾರಗಳಿಗಾಗಿ ಇವರು ಹಾತೊರೆಯದಿದ್ದರೂ ಅವೇ ಇವರನ್ನು ಹುಡುಕಿಕೊಂಡು ಬಂದ ಉದಾಹರಣೆಗಳೂ ಉಂಟು. ಶ್ರೀಯುತರಿಂದ ಸಮಾಜಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸೇವೆ ಸಲ್ಲಲಿ ಎಂದು ಹಾರೈಸಬಹುದಾಗಿದೆ.

— -ಶಿವಳ್ಳಿ ಕೆಂಪೇಗೌಡ

ಜಗನ್ಮಾತೆ ಶ್ರೀ ಶ್ರೀ ಶ್ರೀ ಕಾವೇರಿ ಮಾತೆಯ ಕಿರುಪರಿಚಯ

ಬೆಳ್ಳಾನೆ ಕಾವೇರಿ, ಬೆಳಗುತ್ತಾ ಬಾರಮ್ಮ ।
ಇರಳೆಲ್ಲಾ ಬೆಳಗಿದ ಬೆಳದಿಂಗಳೆ ॥

ಇರುಳೆಲ್ಲಾ ಬೆಳಗಿದ ಬೆಳದಿಂಗಳ ಬೆಳಕಿನಲಿ ।
ನಮ್ಮೂರ ಪಯರಿಂದ ಬಿಳಿಗಿರಿಗಿಳಿದು ॥

ನಮ್ಮೂರ ಪಯರಿಂದ ಬಿಳಿಗಿರಿಗಿಳಿದಾಗ ।
ಮಳೆಗಿಂತ ಮುಂದಾಗಿ ಬಾರೇ ಶ್ರೀ ಕಾವೇರಿ॥ ಬೆಳ್ಳಾನೆ ಕಾವೇರಿ॥



ಬಿಳಿಯ ಸೀರೆಯನ್ನುಟ್ಟು, ಬಿಳಿಯ ರವಿಕೆಯ ತೊಟ್ಟು।
ಬೆಳೆದಿರುವ ಪಯರಿಗೆ ನೀರನ್ನು ಕೊಟ್ಟು ॥

ಬೆಳೆದಿರುವ ಪಯರಿಗೆ ನೀರನ್ನು ತರುವಾಗ ।
ಮಳೆಗಿಂತ ಮುಂದಾಗಿ ಬಾರೇ ಶ್ರೀ ಕಾವೇರಿ ॥

ನಿನ್ನಯ ನಡೆಚೆಂದಾ, ನಿನ್ನಾ ಮಯ್ಯಾರೆ ಅಂದ ।
ನೀ ಬಂದಾರೆ ನಮ್ಮ ಹಳ್ಳಿಗೆ ಆನಂದ
॥ಬೆಳ್ಳಾನೆ ಕಾವೇರಿ॥

ನೀ ಬಂದಾರೆ ನಮ್ಮ ಹಳ್ಳಿಗೆ ಬಾರೇ ।
ಕರೆವೆ ಕಾವೇರಿ ಶ್ರೀ ತಾಯೇ ॥

ನೀ ಬರುವ ರಭಸಕ್ಕೆ ಜನಗಳು ಬೆದರಿಯಾರು ।
ನೀ ಬರುವ ರಭಸಕ್ಕೆ ದನಗಳು ಬೆದರ್ಯಾವು ॥

ನೀ ಬರುವ ರಭಸಕ್ಕೆ ಮರಗಳು ಬಾಗ್ಯಾವು ।
ನೀ ಬಾರೇ ಶ್ರೀ ಕಾವೇರಿ ತವರಿಗೆ ॥ಬೆಳ್ಳಾನೆ ಕಾವೇರಿ॥

ಶಿವನ ತಲೆ ಮೇಲಿಂದ, ನೀನಿಳಿದು ಬರುವಾಗ ।
ಕನ್ನಂಬಾಡಿಯಲೊಮ್ಮೆ ತಡೆದು ಬಾರಮ್ಮ ॥

ಕನ್ನಂಬಾಡಿಯಲೊಮ್ಮೆ ತಡೆದು ನೀ ಬರುವಾಗ ।
ಶ್ರೀ ರಂಗನ ಪಾದವ ತೊಳೆದು ನೀ ಬಾರಮ್ಮ ॥

ಬೆಳ್ಳಾನೆ ಕಾವೇರಿ ಬೆಳಗುತ್ತಾ ಬಾರಮ್ಮ।
ಇರುಳೆಲ್ಲಾ ಬೆಳಗಿದ ಬೆಳದಿಂಗಳೆ ॥

(ಜಾನಪದ ಗೀತೆ : ಕರ್ಣೇಯ್ಯನ ಕಾಮಿನಿ ಮುದ್ದಯ್ಯ)

ಕಾವೇರಿ ಮಾತೆಯ ಪರಿಚಯ

ಪ್ರತೀ ವರ್ಷವು ಅಕ್ಟೋಬರ್ 17, 18ನೇ ದಿನಾಂಕದಂದು ದಕ್ಷಿಣ ಭಾರತದ ಪುಣ್ಯ ಕ್ಷೇತ್ರಗಳಲ್ಲಿ ಒಂದಾದ ಮೂಲ ತಲಕಾವೇರಿಯಲ್ಲಿ ಜಗನ್ಮಾತೆ ಶ್ರೀ ಕಾವೇರಿ ತಾಯಿಯು, ಲೋಕೋದ್ಧಾರಕಳು, ಪರಮ ಪೂಜ್ಯಳು ಆದವಳು. ತೀರ್ಥರೂಪದಲ್ಲಿ ಕಾಣಿಸಿಕೊಂಡು ತನ್ನ ಕಾವೇರಿ ಬಯಲಿನ ಕೋಟಿ ಭಕ್ತ ವೃಂದವನ್ನು ಆಹ್ವಾನಿಸಿ, ತಾನು ಪೂಜಿಸಲ್ಪಡುವುದು ವಾಡಿಕೆ. ಕೊಡಗಿನ ಜನತೆ ಅದರಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ಕಾವೇರಿ ಸನ್ನಿಧಿಯಲ್ಲಿ ವಾಸವಾಗಿ ನೆಲೆ ನಿಂತಿರುವ ಪ್ರತಿಯೋರ್ವರು ಮಡಿಭಕ್ತಿಯಲ್ಲಿ ತಾಯಿಯನ್ನು ಪೂಜೆಗೈಯ್ಯುವುದರಿಂದ ತಮ್ಮ ಇಸ್ಟಾರ್ಥ ಸಿದ್ಧಿಸುವುದರಲ್ಲಿ ಯಾವುದೇ ಅನುಮಾನವಿಲ್ಲವೆನ್ನುವುದು ಸಹ ಪುರಾಣ ಪ್ರಸಿದ್ಧವಾಗಿದೆ. ಹಾಗೆಯೇ ಜೀವನದಲ್ಲಿ ಒಮ್ಮೆಯಾದರು ದಂಪತಿಗಳಾಗಿ ಭೇಟಿ ಕೊಟ್ಟು ತಾಯಿಯ ಕೃಪೆಗೆ ಪಾತ್ರರಾಗುವುದು ಸಹ ಅಮೂಲ್ಯವಾಗಿದೆ.

ಕಾವೇರಿಯ ಉಗಮಸ್ಥಾನ ಕುಂಡಿಕೆಯಲ್ಲಿ ಸೂರ್ಯದೇವನು ತುಲಾ ರಾಶಿಗೆ ಪ್ರವೇಶಿಸುವ ಪುಣ್ಯಕಾಲದಲ್ಲಿ ಕಾವೇರಿ ಮತ್ತು ಗಂಗೆಯರ ಸಮಾಗಮವೇ ಈ ತೀರ್ಥೋದ್ಭವ ದಿನ. ಈ ತೀರ್ಥೋದ್ಭವ ದಿನ ಸೂರ್ಯನು ತುಲಾ ರಾಶಿಯನ್ನು ಪ್ರವೇಶಿಸುವ ಸಮಯದಲ್ಲಿ ಕುಂಡಿಕಾ ತೀರ್ಥ ಸ್ನಾನವನ್ನು ವಿಧ್ಯುಕ್ತವಾಗಿ ಮಾಡುವುದರಿಂದ ಅಶ್ವಮೇಧದ ಫಲವೂ,

ಸರ್ವ ಪಾಪ ಪುಂಜ ಪರಿಹರಿಸುವಿಕೆಯು, ಮನುಜ ಕುಲವು ಗಂಗಾ ಯಮುನಾ ಸಂಗಮದಲ್ಲಿ ಹೊಂದುವ ಫಲಕ್ಕಿಂತ ಕೋಟಿ ಪಾಲು ಸಿಗುವುದೆಂದು ಮತ್ತು ಪಾಪ ಮುಕ್ತರನ್ನಾಗಿಯೂ, ಮೋಕ್ಷಕ್ಕೆಡೆ ಮಾಡಿಕೊಡುವುದೆಂದು, ಸರ್ವ ಸನ್ಮಂಗಳ ವನ್ನುಂಟುಮಾಡುತ್ತಾಳೆಂಬ ಗಾಢನಂಬಿಕೆ ಇಂದಿಗೂ ಸರ್ವಶ್ರೇಷ್ಠವಾಗಿರುತ್ತದೆ.

ಭಗವಾನ್ ಮಹಾವಿಷ್ಣುವಿನಿಂದ ಅವತರಿಸಿ, ಲಕ್ಷ್ಮೀದೇವಿಯ ಅಂಶದಿಂದ ಹುಟ್ಟಿದವಳಾಗಿ, ಸೃಷ್ಟಿಕರ್ತ ಚತುರ್ಮುಖ ಬ್ರಹ್ಮನ ದತ್ತು ಪುತ್ರಿಯಾಗಿ ತ್ರಿಲೋಕ ಸುಂದರಿಯೂ ಆದವಳು, ತನ್ನ ಅಪ್ರತಿಮ ಸೌಂದರ್ಯಕ್ಕೆ ತನಗೆ ತಾನೇ ಅಸೂಯೆ ಪಟ್ಟುಕೊಳ್ಳುತ್ತಾ, ಕಿಶೋರಿ ಲೋಪಾಮುದ್ರೆಯು ಬೆಳೆಯುತ್ತಾಳೆ. ಇಂದಿಗೂ ಕಾವೇರಿ ಮೂರ್ತಿ ಪೂಜೆ ಬಹಳ ಕಮ್ಮಿಯೇ ಸರಿ. ಅವಳ ಅಪ್ರತಿಮ ಚೆಲುವ ಭವ್ಯಮೂರ್ತಿ ಇಂದು ಎಲ್ಲೂ ಇಲ್ಲವಾಗಿದೆ. ಸುಂದರಿ ಕಾವೇರಿಯಂತೆ ಇಲ್ಲಿ ಜನಿಸಿದ ವನಿತೆಯರು ಸಹ ಚೆಲುವೆಯರಾಗಿ ಇರುವುದೊಂದು ವಿಶೇಷವಾಗಿದೆ.

ಬ್ರಹ್ಮಾಂಡ ಬ್ರಹ್ಮಗಿರಿ ತಪ್ಪಲಿನಲ್ಲಿ ಕವೇರ ಮುನಿ ದಂಪತಿಗಳು ಸಂತಾನ ಭಾಗ್ಯಕ್ಕಾಗಿ ಕಠೋರ ತಪಸ್ಸನ್ನು ಆಚರಿಸುತ್ತಿರಲು ಇವರ ಪರಮ ಭಕ್ತಿಗೆ ಮೆಚ್ಚಿದ ಪರಬ್ರಹ್ಮನು, ತನ್ನ ದತ್ತು ಪುತ್ರಿಯಾದ ಲೋಪಾಮುದ್ರೆಯನ್ನು ಲೋಕ ಕಲ್ಯಾಣಕಾರಿಣಿಯಾಗೆಂದು ಹರಿಸಿ ಅನುಗ್ರಹಿಸುತ್ತಾರೆ. ಅಂದಿನಿಂದ ಕವೇರ ಮುನಿಯ ಮಗಳಾಗಿ "ಕಾವೇರಿ"ಯಾಗುತ್ತಾಳೆ. ದಿನಗಳು ಉರುಳುತ್ತಾ ಇರಲು ಸುಂದರ ಮಗಳ ಲಾಲನೆ, ಪಾಲನೆಯಲ್ಲಿರಲು ಈ ಮುನಿದಂಪತಿಗಳು ದೇಹತ್ಯಾಗ ಮಾಡಿ ಮುಕ್ತಿಯನ್ನು ಹೊಂದುತ್ತಾರೆ.


ಅಂತೆಯೇ ಅನಾಥೆಯಾದ ಈ ಕಾವೇರಿ, ಋಷಿಮುನಿಗಳ ಸೇವೆಯನ್ನು ಮಾಡುತ್ತಾ ಆಶ್ರಮವಾಸಿಯಾಗುತ್ತಾಳೆ. ಲೋಕ ಸಂಚಾರಾರ್ಥವಾಗಿ ಆಗಮಿಸಿದ ಅಗಸ್ತ್ಯ ಋಷಿಗಳ ಇಚ್ಛೆಗೆ ಒಲಿದು, ಜೀವನ ಪರ್ಯಂತ ತನನ್ನು ಒಂದು ಕ್ಷಣವೂ ಬಿಟ್ಟಿರದೆ ತನ್ನೊಡನೆಯೇ ಬಾಳಬೇಕೆನ್ನುವ ವಚನವನ್ನು ಪಡೆದು ಮಹಾ ತಪಸ್ವಿಗಳ ಸಹಧರ್ಮಿಣಿಯಾಗುತ್ತಾಳೆ ಶ್ರೀ ಕಾವೇರಿ.

ಹೀಗಿರಲು ಒಮ್ಮೆ ಅಗಸ್ತ್ಯರು ತನ್ನ ಪತ್ನಿ ಕಾವೇರಿಯನ್ನು ಜಲರೂಪವಾಗಿ ಪರಿವರ್ತಿಸಿ, ಅದನ್ನು ತನ್ನ ಕಮಂಡಲದಲ್ಲಿರಿಸಿ, ಪಕ್ಕದ ಕನ್ನಿಕೆಯ ಬಳಿ ಸ್ನಾನಕ್ಕೆಂದು ತೆರಳುತ್ತಾರೆ. ತನ್ನ ಪತಿಯ ವಚನ ಭಂಗಕ್ಕೆ ಅಸಂತುಷ್ಟಳಾದ, ಪರಮ ಸುಂದರಿ ಕಾವೇರಿ ತನ್ನ ಪಿತೃವಿನ ಇಚ್ಛೆಯಂತೆ ಜೀವಕೋಟಿಯ ಉದ್ಧಾರಕ್ಕಾಗಿ, ಶಾಶ್ವತ ಜಲ ರೂಪವನ್ನು ತಳೆದು, ನದಿಯಾಗಿ ಹರಿದು, ತನ್ನ ಸಂಗಾತಿಯರಾದ, ಕನ್ನಿಕೆ ಮತ್ತು ಸುಜ್ಯೋತಿಯವರೊಡಗೂಡಿ ಮೇಘ ಪರ್ವತದಿಂದ ಇಳಿದು, ಹಸಿರಿನ ಚೆಲುವೆಯಾಗಿ ಪವನ ಶಕ್ತಿಯ ಅಮೋಘಧಾರೆಯಾಗಿ, ತನ್ನ ಪ್ರತಿಯೊಂದು ಕ್ಷಣದ ಬಿಂದುವನ್ನು, ಕೋಟಿ ಕೋಟಿ ಜೀವರಾಶಿಗಳ ಪಾಲಿಗೆ ಚೈತನ್ಯಮಯವಾಗಿರಿಸುತ್ತಾ, ಸದಾ ಸದ್ಭಾವನೆ ಪರೋಪಕಾರಿಣಿಯಾಗಿ, ಅಂದಿನಿಂದ ಈ ಧರೆಯೊಳಗೆ ನಿರಂತರವಾಗಿ ಹರಿಯತೊಡಗಿದಳು. ಪರಮ ಪಾವನೆಯೂ, ಲೋಕೋದ್ಧಾರಕಳು, ಆದ ಮಾತೆ ಶ್ರೀ ಕಾವೇರಿ.

ಕಾವೇರಿ ಮೊದಲು ಬ್ರಹ್ಮಗಿರಿ, ಕುಂಡಿಕೆ ತಲಕಾವೇರಿ, ನಾಗತೀರ್ಥ ಕ್ಷೇತ್ರ, ಭಗಂಡ ಕ್ಷೇತ್ರ, ಭಾಗಮಂಡಲದ ತ್ರಿವೇಣಿ ಸಂಗಮ, ಹರಿಶ್ಚಂದ್ರ ಬಲಮುರಿ, ಗುಹ್ಯ ರಾಮಸ್ವಾಮಿ ಕಣಿವೆ ರಾಮನಾಥಪುರ, ಸಾಲಿಗ್ರಾಮ ಚುಂಚನಕಟ್ಟೆ, ಕಪ್ಪಡಿ ಕ್ಷೇತ್ರ ಎಡತೊರೆ, 2ನೇ ಬಲಮುರಿ, ಶ್ರೀನಿವಾಸ ಕ್ಷೇತ್ರ, ರಂಗನತಿಟ್ಟು, ಕರಿಘಟ್ಟ, ಮಹದೇವಪುರ, ಸೋಮನಾಥಪುರ, ತಿರುಮಕೂಡಲು ನರಸೀಪುರ, ಮುಡಕುತೊರೆ, ತಲಕಾಡು, ಸತ್ಯಗಾಲ, ಗವಿರಾಯನ ಬೆಟ್ಟ, ಶಿವನ ಸಮುದ್ರ, ಸಂಗಮ, ಮೇಕೆದಾಟು, ಹೊಗೆನಕಲ್ ಕರ್ನಾಟಕದಲ್ಲಿ ಹರಿಯುವಳು.

ತದನಂತರ, ತಮಿಳುನಾಡಿನ ಮೆಟ್ಟೂರು, ಭವಾನಿ, ಈರೋಡು, ಕ್ಯಾಂಗನ್ ಪಾಳ್ಯಮ್, ಉಂಜಲೂರು, ಕೊಡುಮುಡಿ ನಿರೂರು ತಿರುಮಕೂಡಲು, ಕಟ್ಟಳೈ, ರಾಮಸಮುದ್ರಮ್, ಸತ್ತಮ್, ತಿರುನಾರಾಯಣಪುರಂ, ತಿರುಈಂಗೋಮಲೈ, ಕರುಪತ್ತೂರು, ಕಳಿತಲೈ, ತಿರುಪರಾತುರೈ, ಮುಕ್ಕಂ, ಶ್ರೀರಂಗಂ, ತಿರುವಾನೈಕ್ಕವಲ್ ತಿರುಚಿರಪಳ್ಳಿ, ಕೃಷ್ಣರಾಮಪುರಂ, ಕಲ್ಲಣೆ, ತಿರುವೈಯಾರ್, ತಂಜಾವೂರ್, ಪಾಪನಾಶನಮ್, ಸ್ವಾಮಿಮಲೈ, ಗೋವಿಂದಪುರಂ, ಧರ್ಮಪುರಂ, ಛಾಯಾವನಮ್, ಪೊಂಪುಹಾರ್ ಹೀಗೆ ಹರಿದು ಈ ಎಲ್ಲಾ ಕ್ಷೇತ್ರಗಳನ್ನು ಪಾವನವನಾಗಿರಿಸಿ, ಕೋಟ್ಯಾಂತರ ಭಕ್ತರನ್ನು ಮಡಿಲಲ್ಲಿ ಪಡೆದು, ಅಲ್ಲಲ್ಲಿ ತನ್ನ ಹರಿವಿನ ಗಾತ್ರ ಪಾತ್ರವನ್ನು ವಿಸ್ತರಿಸಿಕೊಳ್ಳುತ್ತಾ, ಸಂಕುಚಿತಗೊಳ್ಳುತ್ತಾ ಸುಮಾರು 770 ಕಿಲೋಮೀಟರ್‌ಗಳನ್ನು ಕ್ರಮಿಸಿ, ಕಟ್ಟಕಡೆಗೆ ತಾನು ಜನಿಸಿದ ಗಾತ್ರದಷ್ಟೇ ಬಂಗಾಳ ಕೊಲ್ಲಿಯಲ್ಲಿ ಲೀನವಾಗುವಳು ಪರಮಪೂಜ್ಯಳು, ಜಗನ್ಮಾತೆಯೂ ಆದ ಶ್ರೀ ಶ್ರೀ ಶ್ರೀ ಕಾವೇರಿ.

● ಪಟ್ಟಡ ಮುತ್ತಣ್ಣ ಪ್ರಭಾಕರ್.



ಅರೆಭಾಷಿಕಾ

ಓದುಗರಿಗೆ

ಸ್ವಾಗತ

ಸಮಗ್ರ ಅಭಿವೃದ್ಧಿಯ ಹಾದಿಯಲ್ಲಿ ತಲಕಾವೇರಿ, ಭಾಗಮಂಡಲ

ಕೊಡಗಿನ ಪವಿತ್ರ ಕ್ಷೇತ್ರವಾದ ತಲಕಾವೇರಿ ಮತ್ತು ಭಾಗಮಂಡಲದ ಸಮಗ್ರ ಅಭಿವೃದ್ಧಿಗೆ ಮಾತುಗಳು ಕೇಳಿಬರುತ್ತಿದ್ದರೂ ಈ ವರ್ಷ ಇದು ಕಾರ್ಯರೂಪಕ್ಕೆ ಬರುವ ಸಾಧ್ಯತೆಗಳು ಕಂಡುಬರುತ್ತಿವೆ.

ಸರಕಾರದಿಂದ ಈಗಾಗಲೇ ತಲಕಾವೇರಿ ಮತ್ತು ಭಾಗಮಂಡಲದ ಅಭಿವೃದ್ಧಿಗೆ ರೂ. 1 ಕೋಟಿ 25 ಲಕ್ಷ ಬಿಡುಗಡೆಗೊಂಡಿದ್ದು, ರಾಜ್ಯ ಸರಕಾರದ ಬಜೆಟ್‌ನಲ್ಲಿ ಕೂಡ ರೂ. 50 ಲಕ್ಷ ಬಿಡುಗಡೆಯಾಗಿದೆ. ಕೆಲವು ಸಾರ್ವಜನಿಕರೂ ಕೂಡ ಧನ ಸಹಾಯ ಮಾಡಲು ಮುಂದೆ ಬಂದಿದ್ದು, ಪ್ರಸಿದ್ಧ ಚಲನಚಿತ್ರ ನಟ ಹಾಗೂ ಸಚಿವ ಅನಂತ್‌ನಾಗ್‌ರವರು ಶ್ರೀ ಕ್ಷೇತ್ರಗಳಿಗೆ ಭೇಟಿ ನೀಡಿದ್ದಾಗ ಇಲ್ಲಿನ ದುಸ್ಥಿತಿಗಳನ್ನು ಕಂಡು ತಾವು 25 ಸಾವಿರ ರೂ. ಕೊಟ್ಟು ತಮ್ಮ ಖಾತೆಯಿಂದಲೂ ಸಹಾಯ ಮಾಡುವ ಭರವಸೆ ನೀಡಿರುತ್ತಾರೆ.

ಸದ್ಯದಲ್ಲೇ ಐವತ್ತು ಜನರ ನಾಗರೀಕ ಸಮಿತಿಯೊಂದು ರಚನೆಯಾಗಲಿದ್ದು, ಅಭಿವೃದ್ಧಿ ಮೇಲ್ವಿಚಾರಣೆ ನೋಡಿಕೊಳ್ಳಲಿದೆ. ಈ ದಿಸೆಯಲ್ಲಿ ಕೊಡಗು ಏಕೀಕರಣ ರಂಗ ಭಾಗಮಂಡಲದ ನಾಗರೀಕ ಸಮಿತಿ ಮತ್ತು ಕೊಡಗು ದೇವಸ್ಥಾನ ನಿಧಿ ವ್ಯವಸ್ಥಾಪನ ಸಮಿತಿಯವರು ತಮ್ಮದೇ ಆದ ಕೆಲವು ಸಲಹೆ ಸೂಚನೆಗಳನ್ನು ಸಿದ್ಧಪಡಿಸಿದ್ದು, ಕೊಡಗು ಜಿಲ್ಲಾಧಿಕಾರಿ ಹಾಗೂ ಕೊಡಗು ನಿಧಿ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷರೂ ಆಗಿರುವ ಶ್ರೀ ಅಶ್ವತ್ಥ್‌ರವರು ಇದರತ್ತ ಗಮನ ಹರಿಸಿರುತ್ತಾರೆ.

ಸರಕಾರದಿಂದ ಬಿಡುಗಡೆಗೊಂಡಿರುವ ಹಾಗೂ ಸಾರ್ವಜನಿಕರಿಂದ ಸಿಗಲಿರುವ ಹಣ ಎಲ್ಲೂ ದುರುಪಯೋಗವಾಗದೆ, ಸದ್ವಿನಿಯೋಗವಾಗಿ ಶ್ರೀಕ್ಷೇತ್ರ ಭಾಗಮಂಡಲ ಮತ್ತು ತಲಕಾವೇರಿಯು ಪೂರ್ಣ ಅಭಿವೃದ್ಧಿಹೊಂದಿ ಇನ್ನೂ ಹೆಚ್ಚಿನ ಭಕ್ತಾದಿಗಳು ಮತ್ತು ಪ್ರವಾಸಿಗರನ್ನು ತನ್ನತ್ತ ಸೆಳೆಯಲಿ ಎಂದು ಹಾರೈಸೋಣ.

● ಪೊನ್ನೇಟಿ ಬಿ. ಸುನೀಲ್
ಭಾಗಮಂಡಲ-571247.

ಸೈನಿಕ ನಗರ – ಒಂದು ಪಕ್ಷಿನೋಟ

ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಡದಿಂದ ಅನತಿ ದೂರ ದಲ್ಲಿ ತೂಬಿನಕೆರೆಯಲ್ಲಿ ಸೈನಿಕ ನಗರ ಎಂಬ ನಾಮಫಲಕ ದಾರಿ ಹೋಕರ, ಪ್ರಯಾಣಿ ಕರ ಗಮನ ಸೆಳೆಯುತ್ತದೆ. ರಾಷ್ಟ್ರೀಯ ಮಾಜಿ ಸೈನಿಕರ ಸಮನ್ವಯ ಸಮಿತಿ 1989ರಲ್ಲಿ ಮಂಡ್ಯ ನಗರದಲ್ಲಿ ತನ್ನ ಶಾಖೆ ಯನ್ನು ತೆರೆದು ಮಂಡ್ಯ ಜಿಲ್ಲೆಗೆ ಸೀಮಿತ ವಾದಂತೆ ತನ್ನ ಕಾರ್ಯ ಚಟುವಟಿಕೆ ಯನ್ನು ಪ್ರಾರಂಭಿಸಿತು.ಮಾಜಿ ಸೈನಿಕರು ಅವರ ಸಂಬಂಧಿಕರು ಅವರ ಆಶ್ರಿತರಿಗೆ ಮತ್ತು ಇತರರಿಗೂ ಪುನರ್ವಸತಿ ಕಲ್ಪಿಸಿ ಕೊಡುವ ಸ್ತುತ್ಯ ಕಾರ್ಯ ಮಾಡುತ್ತಿದೆ. ಖಾಸಗಿ ಭೂಮಿಯನ್ನು ಖರೀದಿಸಿ ಬಡಾ ವಣೆಯಾಗಿ ಪರಿವರ್ತಿಸಿ ಮಾಜಿ ಸೈನಿಕರ ಕಲ್ಯಾಣ ಕಾರ್ಯಕ್ರಮದಲ್ಲಿ ಸಂಘ ಕ್ರಿಯಾಶೀಲವಾಗಿ ದುಡಿಯುತ್ತಾ ಬಂದಿದೆ.

1989ರಲ್ಲಿ ಸೈನಿಕ ನಗರವನ್ನು ಉದ್ಘಾಟಿಸಿದ ಮಾಜಿ ಲೋಕಸಭಾ ಸದಸ್ಯ ಜಿ. ಮಾದೇಗೌಡರು ಆ ಸಂದರ್ಭದಲ್ಲಿ ಮಾತನಾಡಿ ಮಂಡ್ಯ ಜಿಲ್ಲೆಯಲ್ಲಿ ಇರುವ ಮಾಜಿ ಸೈನಿಕರ ಪುರೋಭಿವೃದ್ಧಿಗೆ ಇಂತಹ ಕಾರ್ಯಕ್ರಮಗಳ ಅನುಷ್ಠಾನ ಅಗತ್ಯ ಎಂದು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು

ಈ ಸಂಸ್ಥೆಯ ಸ್ಥಾಪಕರಲ್ಲಿ ಪ್ರಮುಖ ರಾದ ಸರ್ವ ಶ್ರೀ ಕುಂಜಿರಾಮನ್, ಕೃಷ್ಣ ಮೂರ್ತಿ, ಎಂ. ಎನ್. ಶಿವಶಂಕರ್, ಪಟ್ಟಡ ಎಂ. ಪ್ರಭಾಕರ್, ಆನಂದ್, ಶಿವ ಲಿಂಗಯ್ಯ, ರಾಮಾಚಾರ್, ಭೈರಾಚಾರ್ ಮತ್ತಿತರರ ಶ್ರಮ, ಹೋರಾಟ ಸಾಧನೆ ಯಿಂದ ಸೈನಿಕ ನಗರ ಅಸ್ತಿತ್ವಕ್ಕೆ ಬರಲು ಕಾರಣವಾಗಿದೆ. ಇವರೆಲ್ಲರ ಕಳಕಳಿ ನಿಜಕ್ಕೂ ಅಭಿನಂದನೀಯವಾದುದು.

ತೂಬಿನಕೆರೆ ಹತ್ತಿರ ಮಾಜಿ ಸೈನಿಕರ ವಿದ್ಯಾಸಂಸ್ಥೆ (ರಿ.) ಇದ್ದು ಪ್ರಾಥಮಿಕ ಹಂತದ ತರಗತಿಗಳನ್ನು ವ್ಯವಸ್ಥಿತವಾಗಿ ನುರಿತ ಸುರಕ್ಷಿತ ಶಿಕ್ಷಕಿಯರಿಂದ ಅಚ್ಚು ಕಟ್ಟಾಗಿ ನಡೆಸುತ್ತಿದೆ. ಸುತ್ತಮುತ್ತಲ ಗ್ರಾಮಗಳ ಕೆಲವು ಮಕ್ಕಳ ಪೋಷಕರ ಮನೆಗೆ ತೆರಳಿ ಅವರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ ಅವರನ್ನು ವಿದ್ಯಾವಂತರ ನ್ನಾಗಿ ಮಾಡಬೇಕೆಂದು ಅವರ ಮನಒಲಿಸಿ ಹಾಗೆ ಸೇರಿಸಿಕೊಂಡು ಮಕ್ಕಳಿಗೆ ವಿದ್ಯಾ ದಾನ ಮಾಡುತ್ತಿರುವ ಈ ಶಾಲೆ ಸುತ್ತ ಮುತ್ತಲ ಗ್ರಾಮಗಳ ಜನರನ್ನು ಆಕರ್ಷಿ ಸುತ್ತಿದೆ. ಪೋಷಕರು ತಮ್ಮ ಮಕ್ಕಳನ್ನು ಈ ಶಾಲೆಗೆ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಸೇರಿಸಬೇಕೆನ್ನುವಷ್ಟರ ಮಟ್ಟಿಗೆ ಈ ಶಾಲೆ ಬೆಳೆದಿದೆ.

ಮಾಜಿ ಸೈನಿಕರ ಮೇಲ್ವಿಚಾರಣೆಯಲ್ಲಿ ಈ ಶಾಲೆ ನಡೆಯುತ್ತಿರುವುದರಿಂದ ಸಹಜ ವಾಗಿ ಅಲ್ಲಿನ ಮಕ್ಕಳಿಗೆ ಶಿಸ್ತು, ಶುಚಿ, ವಿದ್ಯಾಭ್ಯಾಸದಲ್ಲಿ ಏಕಾಗ್ರತೆ ರಾಷ್ಟ್ರೀಯ ಪ್ರಜ್ಞೆ ಬೆಳೆಯಲು ಸಹಕಾರಿಯಾಗಿದೆ.

ಸೈನಿಕನಗರಕ್ಕೆ ತೂಬಿನಕೆರೆ ಮಾರ್ಗ ವಾಗಿ ಜಕ್ಕನಹಳ್ಳಿವರೆಗೆ ಶಾಲಾ ಮಕ್ಕಳು ಹೋಗಿಬರಲು ಕಳೆದ ವರ್ಷದಿಂದ ಸಿಟಿ ಬಸ್ ವ್ಯವಸ್ಥೆಯಾಗಿರುವುದು ಶ್ಲಾಘನೀಯ ವಾದುದು. ಈ ವಿದ್ಯಾಸಂಸ್ಥೆ ಸ್ಥಳೀಯ ಜನರ ಸಹಕಾರದೊಡನೆ ಮುನ್ನುಗ್ಗಿ ಬೆಳೆ ಯುವ ಎಲ್ಲಾ ಲಕ್ಷಣಗಳು ಕಾಣು ತ್ತಿವೆ. ಈ ಸಂಸ್ಥೆಯ ಶಾಲೆ ಸರ್ವತೋ ಮುಖ ಅಭಿವೃದ್ಧಿ ಹೊಂದಿ ತನ್ನ ಕ್ಷೇತ್ರ ವನ್ನು ವಿಸ್ತರಿಸಿಕೊಂಡು ಮುಂದೆ ವಸತಿ ಶಾಲೆಯಾಗಿ ಮಾರ್ಪಾಟುಗೊಂಡರೆ ಸುತ್ತ ಮುತ್ತಲ ಗ್ರಾಮಗಳ ಮಕ್ಕಳಿಗೆ ಉಪ ಯೋಗವಾಗುತ್ತದೆ.

ಮಂಡ್ಯ ಜಿಲ್ಲೆಯ ದಾನಿಗಳು ಈ ಶಾಲೆಯ ಪುರೋಭಿವೃದ್ಧಿಗಾಗಿ ಧನ ಸಹಾಯ ಸಹಕಾರ ನೀಡಿದರೆ ಈ ಶಾಲೆ ಸರ್ವತೋಮುಖವಾಗಿ ಬೆಳೆದು ಪ್ರಮುಖ ವಿದ್ಯಾ ಕೇಂದ್ರವಾಗಿ ಬೆಳೆದು ಶೈಕ್ಷಣಿಕ ವಾಗಿ ತನ್ನದೇ ಆದ ಸಾಧನೆ ಮಾಡಿ ಯಶಸ್ಸುಗಳಿಸುವುದರಲ್ಲಿ ಸಂಶಯವಿಲ್ಲ.

–ಶಿವಳ್ಳಿ ಕೆಂಪೇಗೌಡ

ಕಿತ್ತಳೆ ನಾಡಿನ ಕನಸುಗಾರ – ಪಟ್ಟಡ ಮುತ್ತಣ್ಣ ಪ್ರಭಾಕರ

ನಲವತ್ತೆಂಟು ವಸಂತಗಳನ್ನು ದಾಟರುವ ಪಟ್ಟಡ ಮುತ್ತಣ್ಣ ಪ್ರಭಾಕರರವರು ನಿಸರ್ಗ ಸೌಂದರ್ಯದ ತಾಣವಾದ ಕರ್ನಾಟಕದ ಕಾಶ್ಮೀರ ಎಂದು ಖ್ಯಾತವಾಗಿರುವ ಕೊಡಗು ಜಿಲ್ಲೆಯ ಮಡಿಕೇರಿ ಸಮೀಪದ ಅಮಂದೂರಿನವರು.

ಪಟ್ಟಡ ಪ್ರಭಾಕರರವರ ತಂದೆ ದಿ|| ಕಾರ್ಯಪ್ಪ ಮುತ್ತಣ್ಣ, ತಾಯಿ ನೀಲವ್ವ ಮುತ್ತಣ್ಣ. ನಾಲ್ಕು ಜನ ಸಹೋದರರಲ್ಲಿ ಪ್ರಭಾಕರರವರು ಎರಡನೆಯವರು. ಇವರಿಗೆ ಮೂರು ಮಂದಿ ಸಹೋದರಿಯರಿದ್ದಾರೆ. ಇಬ್ಬರು ಮಕ್ಕಳು ಇರುವ ಇವರ ಅರ್ಧಾಂಗಿ ಶೀಲಾಮಣಿ, ಕರ್ಣೇಯ್ಯನ ಶ್ರೀ ಚೆಣ್ಣಪ್ಪನವರ ಮಗಳು. ಇವರು ಉತ್ತಮ ಗೃಹಿಣಿ ಸಹ ಹೌದು.

ಪ್ರಭಾಕರ ಅವರು 1968ರಲ್ಲಿ ಭಾರತೀಯ ವಾಯುಸೇನೆಗೆ ಸೇರ್ಪಡೆಯಾದರು. ಬೆಳಗಾಂ, ಡೆಲ್ಲಿ, ಚಂಡಿಗರ್, ಕಾಶ್ಮೀರ, ಹಿಮಾಚಲ ಪ್ರದೇಶ, ಅಸ್ಸಾಂನ ಗೌಹಾಟ ಸಿಲಿಚಾರ್ ಹಾಗೂ ಬೆಂಗಳೂರಿನಲ್ಲಿ ಸೇವೆ ಸಲ್ಲಿಸಿದ್ದಾರೆ. 1971ರಲ್ಲಿ ಭಾರತ್ ಪಾಕಿಸ್ಥಾನ ಯುದ್ಧದ ಸಂದರ್ಭದಲ್ಲಿ ಇವರು ಉತ್ತಮ ಸೇವೆ ಸಲ್ಲಿಸಿ ಕೀರ್ತಿಶಾಲಿಯಾಗಿದ್ದಾರೆ. ಕೊಡಗು ವೀರ ಯೋಧರ ಮಹಾನ್ ದೇಶ ಭಕ್ತರ ತಾಣ ಭಾರತದ ಮೊದಲ ಮಹಾ ದಂಡನಾಯಕ ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಮತ್ತು ಜನರಲ್ ಕೆ. ಎಸ್. ತಿಮ್ಮಯ್ಯ ಮುಂತಾದ ಮಹಾನೀಯರಿಗೆ ಜನ್ಮ ನೀಡಿದ ಪುಣ್ಯ ಭೂಮಿ. ಈ ಪರಂಪರೆಯಲ್ಲಿ ಬಂದ ಶ್ರೀ ಪ್ರಭಾಕರರವರು ಭಾರತೀಯ ವಾಯುಪಡೆಯಲ್ಲಿ ಸೇವೆ ಸಲ್ಲಿಸಿ, 1983ರಲ್ಲಿ ನಿವೃತ್ತರಾಗಿ, ನಂತರ 1985 ರಿಂದ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಶ್ರೀರಂಗಪಟ್ಟಣದ ಮಹದೇವಪುರ ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸರಳ ಸೌಜನ್ಯ, ಸ್ನೇಹಶೀಲ ವ್ಯಕ್ತಿಯಾದ ಪ್ರಭಾಕರ ಅವರು 1989ರಲ್ಲಿ ಮಂಡ್ಯ ಜಿಲ್ಲೆಯಲ್ಲಿ ನಿವೃತ್ತ ಯೋಧರನ್ನು ಸಂಘಟಿಸಿ,



ಪಟ್ಟಡ ಪ್ರಭಾಕರ

ತೂಬಿನಕೆರೆ ಸಮೀಪ ಸೈನಿಕ ನಗರ ಸ್ಥಾಪನೆಯಾಗಲು ಪ್ರಮುಖ ಕಾರಣ ಕರ್ತರಾಗಿದ್ದಾರೆ.

ಹಿಡಿದ ಕೆಲಸವನ್ನು ಬಿಡದೆ ಹಠ ಸಾಧಿಸುವ ಛಲ ಇರುವ ಪ್ರಭಾಕರ ಸಮಾಜಕ್ಕೆ ಹಿತಕಾರಿಯಾದ ಏನಾದರೊಂದು ಕಾರ್ಯ ಚಟುವಟಿಕೆ ನಡೆಸುವುದರಲ್ಲಿ ಸದಾ ಮುಂದಿದ್ದಾರೆ.

ಕೊಡಗು ವೀರಯೋಧರ ತಾಣವಾಗಿರುವಂತೆಯೇ ಉತ್ತಮ ಕ್ರೀಡಾಪಟುಗಳು, ಕಲಾವಿದರು, ಸಾಹಿತಿಗಳಿಗೆ ಹೆಸರುವಾಸಿಯಾಗಿದೆ. ಹಾಗೆಯೇ ಸಾಹಿತ್ಯ ಕ್ಷೇತ್ರದಲ್ಲೂ ಸಹ ಪ್ರಭಾಕರ ಅವರು ಕೃಷಿ ಮಾಡಿದ್ದಾರೆ. "ನನ್ನ ಕನಸಿನ ಮಡಿಕೇರಿ" ಎಂಬ ಉಪಯುಕ್ತ ಪುಸ್ತಕ ಬರೆದು, ಕನ್ನಡ ಸಾರಸ್ವತ ಲೋಕಕ್ಕೆ ಪಾದಾರ್ಪಣೆ ಮಾಡಿದ್ದಾರೆ. 1994ರಲ್ಲಿ ಪ್ರಕಟವಾದ ಈ ಕೃತಿ ಹಲವಾರು ದೃಷ್ಟಿಯಿಂದ ಗಮನಾರ್ಹವಾಗಿದೆ. ಮಡಿಕೇರಿಯಷ್ಟೇ ಅಲ್ಲದೆ, ಕೊಡಗಿನ ಸೌಂದರ್ಯ ಮತ್ತು ಅಭಿವೃದ್ಧಿಯ ಬಗ್ಗೆ ರಚನಾತ್ಮಕ ಸಲಹೆ ನೀಡಿರುವ ಈ ಅಪೂರ್ವ ಕೃತಿ ಜನಾಂಗೀಯ ಸಾಮರಸ್ಯಕ್ಕೆ ಒತ್ತು ನೀಡಿರುವುದು ವಿಶೇಷ. ಸರಳ, ಸ್ನೇಹಜೀವಿ ಪಟ್ಟಡ ಎಂ. ಪ್ರಭಾಕರ ಅವರ ತವರು ನೆಲದ ಬಗೆಗಿನ ಪ್ರೀತಿ, ಸ್ನೇಹ ಮತ್ತು ಮುಂದಾಲೋಚನೆಯ ಶ್ರಮದ ಫಲವಾಗಿ "ನನ್ನ ಕನಸಿನ ಮಡಿಕೇರಿ" ಒಂದು ಉತ್ತಮ ಕೃತಿಯಾಗಿ ರೂಪುಗೊಂಡಿದೆ.

ಪಟ್ಟಡ ಪ್ರಭಾಕರರವರು ಸೂಚಿಸಿರುವ ಹಲವು ಉಪಯುಕ್ತ ಜನಪರ ಸಲಹೆಗಳನ್ನು ಈ ಪುಸ್ತಕದ ಬಿಡುಗಡೆಯ ಸಂದರ್ಭದಲ್ಲಿ ಆಗಿನ ಪುರಸಭಾಧ್ಯಕ್ಷ ಶ್ರೀ ಮುಕ್ಕಾಟಿ ಸಿ. ವಾಸುದೇವ್‌ರವರು ಮಾತನಾಡುತ್ತ ಪ್ರಭಾಕರ ಅವರು ನೀಡಿರುವ ಹಲವು ಸೂಚನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಖಂಡಿತವಾಗಿಯೂ ಶ್ರಮಿಸುವುದಾಗಿ ಹೇಳಿರುವುದು ಈ ಕೃತಿಯ ಮೌಲಿಕತೆಯನ್ನು ಹೆಚ್ಚಿಸಿದೆ. ಪ್ರಭಾಕರರವರ ಸೇವೆಯನ್ನು ಮೆಚ್ಚಿ ಕೊಡಗಿನ ಜನತೆ ತಮ್ಮ ಹರ್ಷ ವ್ಯಕ್ತಪಡಿಸಿರುವುದು ಸಂತೋಷದ ಸಂಗತಿಯಾಗಿದೆ.

ಪ್ರತಿಯೊಬ್ಬರು ವಿವಿಧ ರೀತಿಯ ಕನಸುಗಳನ್ನು ಕಾಣುತ್ತಾರೆ. ಹಲವರ ಕನಸು ಸ್ವಾರ್ಥತೆಯಿಂದ ಕೂಡಿರುತ್ತದೆ. ಕೆಲವರು ಸಮಾಜ ಸೇವೆ ಮಾಡುವ ಕನಸು ಕಾಣುತ್ತಾರೆ. ಇಂತಹ ವಿರಳ ಪಂಕ್ತಿಯಲ್ಲಿ ಪಟ್ಟಡ ಪ್ರಭಾಕರ ಅವರು ಎದ್ದು ಕಾಣುತ್ತಾರೆ ಎಂದು ಕೊಡಗು ದೈನಿಕ ತನ್ನ

ಮೆಚ್ಚುಗೆ ವ್ಯಕ್ತಪಡಿಸಿದೆ.

ಪಟ್ಟಡ ಪ್ರಭಾಕರ ಇವರ ಸಾಹಿತ್ಯ ಲೋಕದ ಕೃತಿಯ ಬಗ್ಗೆಯೂ ಮಂಡ್ಯ ಜಿಲ್ಲೆಯಲ್ಲಿ ಸೈನಿಕನಗರ ಸ್ಥಾಪಿಸಿ ಸಾಕಷ್ಟು ಶ್ರಮಿಸಿದ ಶ್ರೀಯುತರ ಸೇವೆಯನ್ನು ಪರಿಗಣಿಸಿ, ದಿನಾಂಕ 5-1-97ರಲ್ಲಿ ಗ್ರಾಮ ಬೆಳಕು, ಸಾಂಸ್ಕೃತಿಕ ವೇದಿಕೆ ಇವರ ಆಶ್ರಯದಲ್ಲಿ ಆ ಕಾರ್ಯನಿರತ ಪತ್ರಕರ್ತರ ಕಟ್ಟಡ, ಮಂಡ್ಯ ನಗರ ಇಲ್ಲಿ ಅಭಿನಂದನಾ ಸಮಾರಂಭವನ್ನು ಏರ್ಪಡಿಸಿ ಪ್ರಶಂಸಿಸಿ, ಶಾಲು ಹೊದಿಸಿ ಮಂಡ್ಯ ಜನತೆ ಸನ್ಮಾನಿಸಿದ್ದು ಕಿರೀಟಪ್ರಾಯ ವಾಗಿದೆ.

ಶ್ರೀಯುತರು 1976 ರಲ್ಲಿ ತಾಯಿ ನೀಲಮ್ಮನವರ ಹೆಸರಿನಲ್ಲಿ ಕೊಡಗು ಗೌಡ ವಿದ್ಯಾ ಸಂಘ, ಮಡಿಕೇರಿ ಇದರ ಆಶ್ರಯ ದಲ್ಲಿ ಸ್ಥಾಪಿಸಿದ ಸ್ಮಾರಕ ವಿದ್ಯಾರ್ಥಿ ವೇತನ ನಿಧಿಯ ಮೂಲ ಪುರುಷರು ಸಹ ಹೌದು. 1979ರಲ್ಲಿ ಪಟ್ಟಡ ಕುಟುಂಬ ಸ್ಥರ ಜೀರ್ಣೋದ್ಧಾರ ಸಂಘದ ಸ್ಥಾಪನೆ ಹಾಗೂ ಬೈಲಾ ತಯಾರಿಕೆ. 1983 ರಿಂದಲೂ ಕೊಡಗು ಗೌಡ ವಿದ್ಯಾ ಸಂಘದ ನಿರ್ದೇಶಕರಾಗಿ ದುಡಿಯುತ್ತಿದ್ದಾರೆ. 1986ರಲ್ಲಿ ಮಂಡ್ಯ ನಗರದಲ್ಲಿ ತನ್ನವರ ಸಂಘಟನೆಗಾಗಿ "ಸಂತೋಷ ಕೂಟದ ಸ್ಥಾಪನೆ ಮತ್ತು ಸೈನಿಕ ನಗರ ಸ್ಥಾಪನೆಯಾಗಲು ಪ್ರಮುಖ ಪಾತ್ರವಹಿಸಿದ್ದಾರೆ. 1995ರಲ್ಲಿ ಮಾಜಿ ಸೈನಿಕರ ವಿದ್ಯಾ ಸಂಸ್ಥೆ, ಸೈನಿಕ ನಗರ, ಮಂಡ್ಯ ಅದರ ಸ್ಥಾಪಕರಾಗಿ 15 ಸಾವಿರ ರೂ. ಗಳ ಉಚಿತ ಬಟ್ಟೆ, ಶಾಲಾ ಸಾಮಗ್ರಿಗಳನ್ನು ಕೊಟ್ಟು ಪ್ರೋತ್ಸಾಹಿಸುವಲ್ಲೂ ಮತ್ತು ಸೈನಿಕ ನಗರಕ್ಕೆ ಬಸ್ಸಿನ ಸೌಕರ್ಯ ವಿಸ್ತರಿಸುವಲ್ಲೂ ಸಹ ಪ್ರಮುಖ ರುವಾರಿಯಾಗಿದ್ದಾರೆ. ಧಾನ ಧರ್ಮಾದಿಗಳಲ್ಲಿ ಸಹ ಇವರು ಎತ್ತಿದ ಕೈಯಾಗಿ, ಬಡವರ ಶ್ರೇಯಸ್ಸಿಗಾಗಿ ತನ್ನವರ ಏಳಿಗೆ ಹಾಗೂ ಪ್ರಗತಿಯೇ ಗುರಿಯೆಂದು ಭಾವಿಸುವಶ್ರೀ ಪ್ರಭಾಕರ ಇವರ ಕಾರ್ಯ ಕ್ಷೇತ್ರ ಮಾತ್ರ ತುಂಬ ವಿಶಾಲವಾದದ್ದು.

ತಾವು ಹುಟ್ಟಿದ ನೆಲದ ಬಗ್ಗೆ ಅಭಿಮಾನ ಕಳಕಳಿ ಹೊಂದಿರುವ ಪ್ರಭಾಕರ ಅವರ ಕನಸುಗಳೆಲ್ಲವು ನನಸಾಗಿ ಶ್ರೀಯುತರ ಲೇಖನಿಯಿಂದ ಇನ್ನೂ ಹಲವಾರು ಕೃತಿಗಳು ಹೊರ ಬಂದು ಕನ್ನಡ ಅರಭಾಷಿಕಾ ಸಾರಸ್ವತಲೋಕ ಶ್ರೀಮಂತ ವಾಗಲಿ ಎಂದು ಹಾಗು ಸಕಲ ಐಶ್ವರ್ಯ ಆಯುರಾರೋಗ್ಯಭಾಗ್ಯವನ್ನು ಕೊಟ್ಟು ಕಾಪಾಡಲಿ ಎನ್ನುತ್ತಾ ಶುಭವನ್ನು ಹಾರೈಸುತ್ತೇನೆ.

— ಶಿವಳ್ಳಿ ಕೆಂಪೇಗೌಡ

ಪ್ರಗತಿ ಪಥದತ್ತ ಯುವಶಕ್ತಿ ಸಾಗಲಿ

ವನಸಿರಿಯ ಮಡಿಲಲ್ಲಾಗಲೀ ಅಥವಾ ದಟ್ಟ ಬಯಲುಸೀಮೆಯಲ್ಲಾಗಲೀ ಸಭೆ, ಸಮಾರಂಭ, ಗುಂಪುಗಳಲ್ಲಿ ಎದ್ದು ಕಾಣಿಸಿಕೊಳ್ಳುವವರೆಂದರೆ ಅದು ಕೊಡಗಿನವರಿಗೆ ಮಾತ್ರ ಸೀಮಿತ ಎಂಬ ಭಾವನೆ ಇಂದು ಮೂಡುತ್ತಿದೆ. ಅಂತಹ ಮುಖದ ಭಾವ ನಡವಳಿಕೆ, ತೇಜಸ್ಸು, ನಮ್ಮಲ್ಲಿ ಮನೆ ಮಾಡಿದೆ. ಇವಕ್ಕೆಲ್ಲ ಕಾರಣ ನಮ್ಮ ನಾಡಿನ ಹವಮಾನವೆಂದು ಹೇಳಬಹುದು. ಊಟ ಉಪಚಾರಗಳು ನಮ್ಮಲ್ಲಿ ತುಂಬ ಮಹತ್ವ ವಹಿಸುತ್ತದೆ.

ನಮ್ಮಲ್ಲಿ ಕಾಲಕಾಲಕ್ಕೆ ಸರಿಯಾಗಿ ಆಗುವ ಮಳೆ, ಚಳಿ, ಬೇಸಿಗೆ ಇವುಗಳಿಗೆ ಹೊಂದಿಕೊಂಡು ಬಾಳುವ ಜನಸಾಮಾನ್ಯನ ಮನ ಒಂದು ಸೀಮಿತದಲ್ಲಿರುವುದು ಕಾಣಬಹುದು. ನಮ್ಮ ನಾಡನ್ನು ಚಿರಾಪುಂಜಿಗೆ ಹೋಲಿಸಬಹುದು. ಮಯಸ್ಸು ಮೀರಿದರು ಅವನಲ್ಲಿ ಲವಲವಿಕೆ, ಹಾಸ್ಯ ಪ್ರಜ್ಞೆ, ಹೊಂದಿಕೊಂಡು ಬಾಳುವ ಮನೋಭಾವ ನಮ್ಮಲ್ಲಿ ಮಾತ್ರ ಕಾಣಬುದು. ಹೀಗಿರುವಾಗ ಯುವ ಜನತೆ ಇಂದು ಮುಂದೆ ಬಂದು ನಮ್ಮ ನಾಡನ್ನು ಉಳಿಸಿಕೊಳ್ಳಲು ಎಲ್ಲರು ಸಂಘಟಿತರಾಗ ಬೇಕಾಗಿದೆ.

ಸಂಘಟನೆಯನ್ನು ಒಂದು ಮಾಧ್ಯಮದ ಮೂಲಕ ಮೂಡಿಸಬೇಕು ತಮ್ಮಲ್ಲಿರುವ ದೈವದತ್ತ ಬಳವಳಿಯೆಂದೇ ಹೇಳಬಹುದಾದ ನಿಮ್ಮ ಬುದ್ಧಿವಂತಿಕೆಯನ್ನು ಇಂದು ಒರೆಗೆ ಹಚ್ಚಿ ಮುನ್ನಡೆಯ ಬೇಕಾಗಿದೆ. ನಿಮ್ಮ ದೇಹದಾರ್ಢ್ಯತೆ ಧೈರ್ಯ ತುಂಬಿದ ಮನವನ್ನು ಎಲ್ಲಾ ವಲಯಗಳಲ್ಲಿ ಹರಿಸಿದ್ದೀರಿ. ನೀವು ಒಬ್ಬ ಮಹಾನ್ ವ್ಯಕ್ತಿಯಾಗಿ ಬೆಳೆಯುವ ನಿಮ್ಮಲ್ಲಿ ಎಲ್ಲಾ ಶಕ್ತಿಗಳು ತುಂಬಿರುವಾಗ ನೀವು ಯಾವುದೇ ಕಾರಣಕ್ಕೂ ಹಿಂದಿರುಗಿ ನೋಡಬೇಕಾದ ಅನಿವಾರ್ಯತೆಯ ಸಂದರ್ಭಗಳು ಬರಬಾರದಾಗಿದೆ. ನಾಡಿನ ತುಂಬ ತುಂಬಿರುವ ನೀವುಗಳು ಮನಬಿಚ್ಚಿ ಒಬ್ಬರನ್ನೊಬ್ಬರು ಸಹಕರಿಸುದರ ಮೂಲಕ ಮುನ್ನಡೆಯಿರಿ. ನಿಮ್ಮ ಮನೆ ಮಠಗಳಿಗೆ ಮಾತ್ರ ನೀವು ಯಜಮಾನರಂತೆ ವರ್ತಿಸದೆ ಸುತ್ತಮುತ್ತಲಿನ ಸಾಮಾನ್ಯರನ್ನು ಬಡಿದೇಳಿಸಿ ಮುನ್ನಡೆಯಿರಿ. ಗಂಗೆಯಿಂದ ಕಾವೇರಿಯವರೆಗೆ ಎಂಬಂತೆ ನಾವು ಕಾವೇರಿಯಿಂದ ಗಂಗೆಯವರೆಗೆ ಏಕೆ ಸಾಗಬಾರದು? ನಿಮ್ಮಲ್ಲಿ ಹರಿಯುವ ತೊಟ್ಟು ಬೆವರಿನ ಹನಿಗೂ ಬೆಲೆಕಟ್ಟಿ ಆಗ ಅದು ಹನಿಹನಿ ಕೂಡಿದರೆ ಹಳ್ಳವಾಗಬಹುದು !

● ಕಟ್ರತನ ಜಯರಾಂ
ಮೈಸೂರು ಮಿತ್ರ, ಮೈಸೂರು.

ಪಂಚಲಿಂಗಗಳ ತಾಣ – ಆದಿಚುಂಚನಗಿರಿ ಕ್ಷೇತ್ರ

ಆದಿಚುಂಚನಗಿರಿ ಕ್ಷೇತ್ರವು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೋಕು, ತುಮಕೂರಿಗೆ ಹೋಗುವ ಹೆದ್ದಾರಿಯಲ್ಲಿ ಬಲಭಾಗದಲ್ಲಿ ಕಾಣುವ ಗಿರಿಯೇ ಆದಿ ಚುಂಚನಗಿರಿ ಕ್ಷೇತ್ರ. ಈ ಗಿರಿಯು ಬೃಹದಾಕಾರದ ಬೆಬ್ಬಂಡೆಯಿಂದ ಕೂಡಿದೆ. ಗಿರಿಯೆಲ್ಲಾ ಬಂಡೆಗಳಿಂದಲೇ ಆವರಿಸಿದೆ. ಈ ಕ್ಷೇತ್ರಕ್ಕೆ ಶತಮಾನಗಳಷ್ಟೇ ಹಳೆಯದಾದ ಶಾಸನಗಳ ಆಧಾರವೂ, ಪುರಾಣೇತಿಹಾಸದಿಂದ ಕೂಡಿದೆ. ಪರಶಿವನ ಪ್ರಿಯವಾದ ತಾಣವೂ, ಹಿಂದೆ ಪರಶಿವನು ತನ್ನ ಕೈಲಾಸವನ್ನೇ ಮರೆತು ಈ ಗಿರಿಯಲ್ಲಿಯೇ ತಪಸ್ಸು ಮಾಡಿರುವ ಜ್ವಾಲಾಪೀಠವೂ ಇದೆ. ನಂತರ ಸಿದ್ಧ ಯೋಗಿಗಳಿಗೆ ಈ ಸ್ಥಳವನ್ನು ಬಿಟ್ಟುಕೊಡುವಾಗ ತನ್ನ ಪಂಚ ಪ್ರಾಣವು ಇಲ್ಲಿಯೇ ನೆಲೆಸುತ್ತದೆ ಎಂದು ಹೇಳಿ, ಅವರ ಪ್ರತೀಕವಾಗಿ ಈ ಗಿರಿಯನ್ನು ಗಂಗಾಧರೇಶ್ವರ, ಭೈರವೇಶ್ವರ, ಗವಿಸಿದ್ಧೇಶ್ವರ, ಚಂದ್ರಮೌಳೇಶ್ವರ ಸೋಮೇಶ್ವರ ಎಂಬುದಾಗಿ ಐದು ಲಿಂಗಗಳಿಂದ ಕೂಡಿದೆ.

ಈ ಕ್ಷೇತ್ರದ ಆರಾಧನಾ ಮೂರ್ತಿ ಭೈರವೇಶ್ವರ - ಪಾರ್ವತಿ ದೇವಿಯವರು (ಕಂಬದಮ್ಮ) ಎಂದು ಜಾನಪದದ ರೂಢಿಯಲ್ಲಿದೆ. ಗ್ರಾಮೀಣ ಮಹಿಳೆಯರು ಜಾತ್ರಾ ಸಮಯದಲ್ಲಿ ಭೈರ ಮತ್ತು ಕಂಬದಮ್ಮ ಇವರುಗಳ ಮೇಲೆ ಜಾನಪದ ಹಾಡುಗಳನ್ನು ಹಾಡುತ್ತಾರೆ. ಇಡಿ ರಾತ್ರಿಯೆಲ್ಲ ಕಾಲಭೈರವೇಶ್ವರನ ಆರಾಧನೆಯು ನಡೆಯುತ್ತದೆ.

ಈ ಕ್ಷೇತ್ರದಲ್ಲಿ ಪರಶಿವನೇ ವಿನಹ: ಭೈರೆಯಲ್ಲಿ ಶಿವನೇ ಭೈರವನು ಎಂದು ಎಷ್ಟೋ ಪುರಾಣಗಳು ಸಾರಿವೆ. ಅದನ್ನು ಶ್ರೀ ಶಂಕರಾಚಾರ್ಯರು ರಚಿಸಿರುವ ಶಂಕರ ಸಂಗೀತೆಯಲ್ಲಿ ವರ್ಣಿಸಿದ್ದಾರೆ. ಕಾಶಿಯಲ್ಲಿ ಭೈರವನನ್ನು ದರ್ಶನ ಮಾಡದೆ ಕಾಶಿ ವಿಶ್ವನಾಥನನ್ನು ಪೂಜಿಸಿದರೆ ಫಲವಿಲ್ಲ. ಆದ್ದರಿಂದ ಭೈರವನ ದರ್ಶನದಿಂದ ಸಕಲ ಕಷ್ಟವೂ ಕಳೆಯುವುದು ಎಂದು ಉಲ್ಲೇಖಿಸಲಾಗಿದೆ.

ಈ ಕ್ಷೇತ್ರದಲ್ಲಿಯೂ ಆರಾಧ್ಯದೈವ ಶ್ರೀ ಕಾಲಭೈರವೇಶ್ವರನ ಈ ಗಿರಿಯು



ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ

ಪ್ರಕೃತಿ ದತ್ತವಾಗಿ ಕಣ್ಮನತಣಿಸುವ ಸುಂದರ ಪ್ರಶಾಂತವಾದ ತಾಣ. ಭಕ್ತಾದಿಗಳಿಗೆ ಕೈಬೀಸಿ ಕರೆಯುತ್ತಿದೆ ಈ ಗಿರಿಯಲ್ಲಿ ಜ್ವಾಲಾಪೀಠ, ಗಂಗಾಧರೇಶ್ವರ ದೇವಾಲಯ ಪುರಾತನವಾದ ಭಾಗಿಲು ಭೈರವೇಶ್ವರ ದೇವಾಲಯ ಆಕಾಶಭೈರವಗಳಲ್ಲೂ ಚೋಳೂರು ಕಂಬ, ಬಿಂದು ಸರೋವರ ತಪೋಗುಹೆ, ಗುರು ಸಮಾಧಿ ಮಂಟಪ, ಗುರುಕುಲ, ಅನ್ನದಾನಿ ಭೈರವ ನಿಲಯ, ಅನ್ನಪೂರ್ಣೇಶ್ವರಿ ಊಟದ ಅಂಗಳ ಇವುಗಳೆಲ್ಲವನ್ನು ಒಳಗೊಂಡಿದೆ.

ಶಿವನ ಜಡೆಯಿಂದ ಬಿದ್ದ ಹನಿಯು ಇಲ್ಲಿ ಒಂದು ಸರೋವರ ಪ್ರಸಿದ್ಧಿಯಾಗಿದೆ ಈ ಗಂಗೆಯಿಂದಲೇ ದೇವರ ಅಭಿಷೇಕಕ್ಕೆ ಗಂಗೆಯನ್ನು ತೆಗೆದುಕೊಂಡು ಹೋಗುತ್ತಾರೆ. ಇಲ್ಲಿ ಭಕ್ತಾದಿಗಳು ಶ್ರದ್ಧಾ ಭಕ್ತಿಯಿಂದ ಮಿಂದು ಮಡಿಯುಟ್ಟು ಗಂಗೆಯನ್ನು ಪೂಜಿಸುತ್ತಾರೆ.

ಹೋಳಿ ಹುಣ್ಣಿಮೆ ದಿನಜರುಗುವ ರಥೋತ್ಸವಕ್ಕೆ ಸಾವಿರಾರು ಜನ ಬರುತ್ತಾರೆ. ಈ ಜಾತ್ರೆಯಲ್ಲಿ ಬಂದ ಭಕ್ತರು ದೇವರನ್ನು ಪೂಜಿಸಿ ಹರಕೆ ಸಲ್ಲಿಸುತ್ತಾರೆ.

ಗಿರಿಯ ಮೇಲೆ ನಿಂತಿರುವ ಸುಮಾರು 125 ಅಡಿ ಎತ್ತರವಿರುವ ಬಂಡೆಯನ್ನು ಜನರು ತಮ್ಮ ಪ್ರಾಣವನ್ನು ಲೆಕ್ಕಿಸದೆ ಈ ಬಂಡೆಯನ್ನು ಹತ್ತುತ್ತಾರೆ. ಮೇಲೆ ಜ್ಯೋತಿಯನ್ನು ನೋಡಿ ಆನಂದಿಸುತ್ತಾರೆ. ಬಂಡೆಯ ಮೇಲೆ ನಿಂತು ಕೆಳಗೆ ನೋಡಿದರೆ ಜನರೆಲ್ಲ ಚಿಕ್ಕದಾಗಿ ಕಾಣುತ್ತಾರೆ. ಇದೇ ಆಕಾಶಭೈರವದ ವಿಶೇಷ ಇನ್ನೊಂದು ವಿಶೇಷವೆಂದರೆ ಜಾತ್ರೆಯ ಸಮಯದಲ್ಲಿ ಇಲ್ಲಿಯ ಗುರುಗಳಿಗೆ ಕಿರೀಟ ಧಾರಣೆ ಮಾಡಿ ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡುತ್ತಾರೆ. ತೇರಿನ ಬದಿಯಲ್ಲಿ ರಥವೂ ಉತ್ಸವ ಮೂರ್ತಿಯಾದ ಶ್ರೀ ಗಂಗಾಧರ ಸ್ವಾಮಿಯ ಮೆರವಣಿಗೆಯು ಜರುಗುವುದು. ಇದನ್ನು ಕಂಡ ಜನರು ಕೇಕೆ ಹಾಕುತ್ತಾ ತಮ್ಮ ಹರ್ಷವನ್ನು ವಕ್ತಪಡಿಸುತ್ತಾರೆ. ಈ ಸಮಯದಲ್ಲಿ ಮದ್ದು ಗುಂಡು, ಬಾಣ ಬಿರುಸುಗಳನ್ನು ಸುಡುತ್ತಾರೆ. ಆಕಾಶದೆತ್ತರಕ್ಕೆ ಹಾರಿ ಕೆಳಕ್ಕೆ ಬೀಳುವ ಉಲ್ಕೆಗಳ ಪ್ರತಿರೂಪವಾದ ಮದ್ದುಗಳು ಗಿರಿಯೆಲ್ಲಾ ಜೈಕಾರದ ಧ್ವನಿಯಿಂದ ಕೂಡಿರುತ್ತದೆ. ಇವುಗಳನ್ನೆಲ್ಲಾ ಕಂಡ ಮನವೇ ಪಾವನವು ಎಂದು ಭೈರವನನ್ನು ನೆನೆಯುತ್ತಾರೆ, ಹಾಡುತ್ತಾರೆ, ಕುಣಿಯುತ್ತಾರೆ ಎಲ್ಲೆಲ್ಲೂ ಹರ್ಷದ ಹೊನಲು ಹರಿಯುತ್ತದೆ.

ಆದಿಚುಂಚನಗಿರಿ ಕ್ಷೇತ್ರದ ಗುರು ಪರಂಪರೆಗೆ ಪೂರಕವಾದಭೈರವ ವರಪ್ರಸಾದವಾಗಿ ಈ ಭೂಮಿಯಲ್ಲಿ ಜನಿಸಿ ಹರ್ಷ ತೇಜೋಹಂಸ ಪುಂಜರಾಗಿ, ಪೂರ್ಣಚಂದ್ರನಂತೆ ಕಂಗೊಳಿಸುತ್ತ ನಿತ್ಯ ನಗುಮುಖದ

ಆಶಾಜ್ಯೋತಿ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಯವರು ಈ ಗುರುಪೀಠವನ್ನು ಅಲಂಕರಿಸಿದರು.

ಸಿದ್ಧ ಸಿಂಹಾಸನಾಧೀಶ್ವರ
ಸುಗುಣ ಗಂಭೀರ
ಶ್ರೀ ಬಾಲಗಂಗಾಧರ

ಇವರು ಶ್ರೀಮಂತ ಮನೆತನದಲ್ಲಿ ಹುಟ್ಟಿದರು. ಆದರೂ ಕೂಡ ಆ ಸುಖವನ್ನು ತ್ಯಜಿಸಿ ತಮ್ಮ ಆರಾಧ್ಯ ದೈವ ಶ್ರೀ ಕಾಲಭೈರವೇಶ್ವರನನ್ನು ಪೂಜಿಸಲು, ಚಿಂತಿಸಲು ಮನುಕುಲದ ಉದ್ಧಾರಕ್ಕೆ ಬುದ್ಧ, ಪರಮಹಂಸ, ಅರವಿಂದ, ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ ಪುಳಕಿತರಾಗಿ ಪರಮಾರ್ಥಿಕದ ಕಡೆ ಚಿಂತೆ ಮಾಡಿ ವೇದಶಾಸ್ತ್ರಗಳನ್ನು ಸಂಸ್ಕೃತ ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿ ಅವರ ಆರಾಧ್ಯ ದೈವ ಶ್ರೀ ಭೈರವನನ್ನು ಸ್ಮರಿಸುತ್ತಾ ಶ್ರೀ ಗಿರಿಯಲ್ಲಿ ನಿಂತರು. ಇವರನ್ನು ಕಂಡ ಭಕ್ತರು ಇವರಲ್ಲಿ ಅಡಕವಾಗಿರುವ ದೈವಶಕ್ತಿಗೆ ಶರಣಾಗಿ ಸ್ವಾಮೀಜಿಯೊಡನೆ ದುಡಿಯಲು ಕಂಕಣ ಬದ್ಧರಾದರು. ಗುರುಪೀಠಕ್ಕೆ ಬಂದ ಕೆಲವೇ ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಸಾಧನೆಯಾಗದೆ ಉಳಿದವ್ವನ್ನೆಲ್ಲಾ ಸಾಧಿಸಿ ಯುಗ ಪುರುಷರೆನಿಸಿದರು ಶ್ರೀ ಬಾಲಗಂಗಾಧರನಾಥ ಸ್ವಾಮಿ.

ಆದಿಚುಂಚನಗಿರಿಯಲ್ಲಿ ಸರ್ವಜನಾಂಗಕ್ಕೂ ಎಂದು ಶಿಷ್ಯವೃಂದವನ್ನು ಸ್ಥಾಪಿಸಿ ಸಂಸ್ಕೃತ ಪಾಠ ಮತ್ತು ವೇದ ಅಭ್ಯಾಸ ಇವುಗಳಲ್ಲಿ ತೊಡಗಿಸಿದ್ದಾರೆ. ಶ್ರೀ ಕ್ಷೇತ್ರದಲ್ಲಿ ನಿತ್ಯ ದಾಸೋಹ ನಡೆಯುತ್ತಿದೆ. ಇಲ್ಲಿಗೆ ಬಂದ ಭಕ್ತರಿಗೆಲ್ಲಾ ಅನ್ನ ಸಂತರ್ಪಣೆ ನಡೆಯುತ್ತಿದೆ. ಇದಲ್ಲದೆ ಎಷ್ಟೋ ಶಾಲೆ ಮಠಗಳನ್ನು ತೆರೆದು ಬಡ ವಿದ್ಯಾರ್ಥಿಗಳಿಗೆ ನೆರವಾಗಿದ್ದಾರೆ.

ಸ್ವಾಮೀಜಿಯವರು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅದರಲ್ಲೂ ಬಡಜನತೆಗೆ ವಿದ್ಯಾದಾನ, ಪ್ರಾಥಮಿಕ ಶಾಲೆಯಿಂದ ವೈದ್ಯಕೀಯ ಕಾಲೇಜಿನವರೆಗೂ ಶಿಕ್ಷಣವನ್ನು ತೊಡಗಿಸಿದ್ದಾರೆ. ಇದಲ್ಲದೆ, ಬಡ ಜನತೆಯ ಚಿಕಿತ್ಸೆಗಾಗಿ ಗ್ರಾಮೀಣ ಜನತೆಗೆ ಅನುಕೂಲವಾಗುವಂತೆ ಜನರನಹಳ್ಳಿಯಲ್ಲಿ ಆದಿಚುಂಚನಗಿರಿ ಆಸ್ಪತ್ರೆಯನ್ನು ತೆರೆದಿರುತ್ತಾರೆ. ಇಲ್ಲಿ ಬಡ ರೋಗಿಗಳಿಗೆ ಔಷಧೋಪಚಾರವನ್ನು ಕೈಗೊಂಡಿದ್ದಾರೆ. ಇದರ ಜೊತೆಗೆ ವೃದ್ಧಾಶ್ರಮ, ಅಂಧ ಮಕ್ಕಳ ಆಶಾಕಿರಣದಂತಿರುವ ಅಂಧ ಮಕ್ಕಳ ಉಚಿತ ವಸತಿ ಶಾಲೆಯಲ್ಲಿ ಕಲಿಯುವ ಗಳಿಕೆ ಪಡೆಯುವ ಅನುಕೂಲವಿದೆ.

ಆದಿಚುಂಚನಗಿರಿ ಮಹಿಳಾ ಸೇವಾ ಸಮಾಜವನ್ನು ಸ್ಥಾಪಿಸಿ ಇಲ್ಲಿ ಬಡ ಹೆಣ್ಣು ಮಕ್ಕಳಿಗೆ ಉದ್ಯೋಗ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ, ಅವರ ಸಂಕಷ್ಟಗಳಿಗೆ ಮಾರ್ಗದರ್ಶಕರಾಗಿದ್ದಾರೆ. ಅನಾಥ ಮಕ್ಕಳಿಗೆ ಮಾತೃವಾತ್ಸಲ್ಯ ತೋರುತ್ತ ದಿವ್ಯ ಜ್ಯೋತಿಯಾಗಿ ಬೆಳಗುತ್ತಿದ್ದಾರೆ. ಉಚಿತ ಸಾಮೂಹಿಕ ವಿವಾಹ, ನೇತ್ರ ಚಿಕಿತ್ಸಾ ಶಿಬಿರಗಳನ್ನು ನಡೆಸುತ್ತಿದ್ದಾರೆ.

ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಉತ್ಕಟಾಂಕ್ಷೆಯಾದ ತಮ್ಮ ಆರಾಧ್ಯ ದೈವ ಶ್ರೀ ಕಾಲಭೈರವೇಶ್ವರ ದೇವಸ್ಥಾನವನ್ನು ಪಂಚ ಕಳಸವುಳ್ಳ ಗೋಪುರದಿಂದ ನಿರ್ಮಿಸಲು ಸ್ವಾಮಿಯವರು ಮುಂದೆ ನಿಂತಿದ್ದಾರೆ. ಇದರ ಕೆಲಸಕ್ಕಾಗಿ ಹೊರನಾಡಿನಿಂದ ಶಿಲ್ಪಿಗಳನ್ನು ಕರೆತಂದು ಅವರಿಗೆ ಊಟ ವಸತಿಗಳನ್ನು ಕಲ್ಪಿಸಿದ್ದಾರೆ. ದೇವಸ್ಥಾನದ ಕಾರ್ಯ ಭಾರದಿಂದ ಸಾಗಿದೆ. ಈ ಕಾಯಕ್ಕೆ ಸ್ವಾಮೀಜಿಯವರು 15 ಕೋಟಿ ರೂಪಾಯಿಗಳಾಗುವುದೆಂದು ಅಂದಾಜು ಮಾಡಿರುತ್ತಾರೆ. ಇವರ ನೇತೃತ್ವದಲ್ಲಿ ನಡೆಯುತ್ತಿದೆ

ಗುರುಕುಲದಲಿ ಗುರುವಾಗಿ
ಮನು ಕುಲದಲಿ ಶ್ರೇಷ್ಠರಾಗಿ
ಶ್ರೀ ಗಿರಿಯಲಿ ನಿಂತಿಹರು
ಶ್ರೀ ಬಾಲಗಂಗಾಧರನಾಥ ಸ್ವಾಮಿ

ಇವರು ವ್ಯಕ್ತಿಯಲ್ಲಿ ಮಹಾನ್ ಶಕ್ತಿ ಕೆಲವೇ ವರ್ಷಗಳಲ್ಲಿ ಶ್ರೀ ಆದಿಚುಂಚನಗಿರಿಯ ಕ್ಷೇತ್ರವನ್ನು ಉತ್ತುಂಗಕ್ಕೆ ಏರಿಸಿದ್ದಾರೆ. ಭಕ್ತರಿಗೆ ಆಶೀರ್ವಾದಿಸುತ್ತ ಸದಾ ಶಾಂತಚಿತ್ತರಾಗಿ ಶ್ರೀ ಗಿರಿಯಲ್ಲಿ ನೆಲೆಸಿದ್ದಾರೆ. ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಪಾದಾರವಿಂದಗಳಿಗೆ ನಮ್ಮ ನಮನ.

● ಮುಂಡಂಡ್ರ ಕೆ. ರಮೇಶ್
ಆಶೀರ್ವಾದ್ ಪ್ರಿಂಟರ್ಸ್,
ಮೈಸೂರು.

ಸಂಗಾತಿಯಲ್ಲಿ ಲೇಖಕರಿಗೊಂದು ಅವಕಾಶ !!

ಕೊಡಗು ಸಂಗಾತಿ ಪತ್ರಿಕೆ ಕಲೆ, ಸಾಹಿತ್ಯ, ಕ್ರೀಡೆ ಹಾಗೂ ಸಂಪ್ರದಾಯವನ್ನು ಕುರಿತ ನಿಮ್ಮ ವೈಚಾರಿಕ ಲೇಖನಗಳನ್ನು ಆಹ್ವಾನಿಸುತ್ತೇವೆ. ಹಿರಿಯ–ಕಿರಿಯ ಲೇಖಕರಿಗೆ ಸ್ವಾಗತ ಲೇಖನಗಳು ಆದಷ್ಟು ಚಿಕ್ಕದಾಗಿ ಚೊಕ್ಕವಾಗಿರಲಿ.

-ಸಂ.

ಕೊಡಗ್‌ನ ಕ್ರಾಂತಿವೀರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ್ರು

1837 ಅಕ್ಟೋಬರ್ 31ರ ದಿನ ಕೊಡಗ್‌ನ ಕ್ರಾಂತಿ ದೀಪ ಒಂದು ಆರಿ ಹೋದ ದಿನ. 19ನೇ ಶತಮಾನದ ಪೂರ್ವಲಿ ಕೊಡಗ್‌ನ ಮೇಲೆ ಬ್ರಿಟಿಸರ್ ಹೇರ್ದ ದಬ್ಬಾಳಿಕೆನ ವಿರೋಧಿಸಿ ನಡ್ಸಿದ ದಂಗೆನ ಕುರ್ತ್ ಇತಿಹಾಸಕಾರರ್ ಸೂಕ್ಷ್ಮ ರೀತಿಲಿ ಶೋಧನೆ ಮಾಡಿ "ಅಮರ ಸುಳ್ಯ ಕಾಟಕಾಯಿ" "ಕೊಡಗ್ ಕೆನರಾ ಬಂಡಾಯತ" ಹೆಸ್ರ್ ಕೊಟ್ಟೊಳೊ ಇಷ್ಟರೊಳಗೆ ಈ ದಂಗೆನ ಕುರ್ತ್ ಲೇಖನ, ಕತೆ, ಪುಸ್ತಕ ಬರ್ದವು ಸ್ವಾಮಿ ಅಪರಂಪಾರ ಮತ್ತೆ ಕಲ್ಯಾಣ ಸ್ವಾಮಿಗೆ ಮುಖ್ಯ ಸ್ಥಾನ ಕೊಟ್ರು ಸಾ ಗುಡ್ಡೆ ಮನೆ ಅಪ್ಪಯ್ಯ ಗೌಡ್ರ ಪಾತ್ರ ಮಾತ್ರ ಬಾಳ ಮಹತ್ವದ್‌ಂತೇಳಿ ತಿಳ್ದ್ ಬಂದದೆ. ಈ ದಂಗೆನ ಮೂಲ ಯವಸ್ಥಗೆ ಅಪ್ಪಯ್ಯ ಗೌಡ್ರೆ ಮುಖ್ಯ ಕಾರಣಂತೇಳ್ದರ್ಲಿ ಯಾವ ಸೊಂಸಯನೆ ಇಲ್ಲೆ.

ಅಪ್ಪಯ್ಯ ಗೌಡ್ರು ತನ್ನ ಪ್ರಾಣನೇ ಸ್ವಾತಂತ್ರ್ಯಕ್ಕಾಗಿ ಅರ್ಪಿಸಿದ ಒಬ್ಬ ತ್ಯಾಗಿ ಜೀವಿ. ಅಪ್ಪಯ್ಯ ಗೌಡ್ರ ಹಿರಿಯೊವು ಸುಳ್ಯದ ಮಾಗಣೆಂದ ಬಂದ್ ಕೊಡಗ್‌ಲಿ ಜಮ್ಮ ಪಡ್ದ್ ನೆಲ್ಸಿದೊವು. (ಸುಳ್ಯದ ಮಾಗಣೇಂತೇಳ್ರೆ ಆಗನ ಮೇಲಣ ಕೊಡಗ್) ಅಪ್ಪಯ್ಯ ಗೌಡ್ರು ಚಿಕ್ಕವೀರರಾಜನ ಕಾಲಲಿ ಜಮೆದಾರರಾಗಿದ್ದೊ. ಕೊಡಗ್ ಬ್ರಿಟಿಸರ ಕೈಗೆ ಸೇರ್ದ ಮೇಲೆ ಆವು ಸಳ್ಯದ ಸುಭೇದಾರ ಆಗಿ ಬ್ರಿಟಿಸ್‌ನವರಆಡಳ್ತನ ಕುಷಿ ಕೊಡದೆ ತನ್ನ ಸಂಗಡಿಗರೊಟ್ಟಿಗೆ ಬ್ರಿಟಿಸ್‌ನವರ ದುರಾಡಳ್ತನ ವಿರೋಧಿಸಿ ಹೋರಾಟ ಮಾಡಿಕೆ ಸುರು ಮಾಡ್ದೊ. ಈ ಹೋರಾಟಲಿ ಅಪ್ಪಯ್ಯ ಗೌಡ್ರು, ಕೆದಂಬಾಡಿ ರಾಮುಗೌಡ್ರು, ಮತ್ತೆ ಹುಲಿಕುಂದ ನಂಜಯ್ಯನವು 'ಅಡಿಪಾಯ'ಗಳಂಗೆ ಇದ್ದೊಂತೇಳಿ ಚರಿತ್ರೆಕಾರರ್‌ಂದ ಬ್ರಿಟಿಸ್ ವರದಿಗಳ್‌ಂದ ನಾವ್‌ಗೆ ಗೊತ್ತಾದೆ.

1834ರ್‌ಲಿ ಕೊಡ್‌ಗ್‌ಲಿ ಬ್ರಿಟಿಸರ ಆಡಳ್ತ ಸುರುಆದೆ. ಆ ಸಮೆಲಿ ಕೊಡಗ್‌ನ ಆಡಳ್ತ ಕೊಡಗ್‌ನ ಅಡಳ್ತ ನಡ್ಸ್‌ತಿದ್ದ ಚಿಕ್ಕವೀರರಾಜನ, ದಿವಾನ ಬೋಪಣ್ಣ ಮತ್ತೆ ಇನ್ನ್ ಕೆಲವರ ಕುತಂತ್ರಂದಾಗಿ ಬ್ರಿಟಿಸರ್ ಬಾಳ ಸುಲ್ಭಲಿ-ಹಿಡ್ದ್ ಪೆ.ಕ್ಯಾ.ಟಿ.ಡಿ. ಕಾರ್ಪೆಂಟ್‌ನ ಮುಂದಾಳತ್ವಲಿ ರಾಜನ ಮಡಿಕೇರಿಂದ ವೆಲ್ಲೂರಿಗೆ ಕರ್ಕಂಡ್ ಹೋಗಿ ಅಲ್ಲಿ ರಾಜ ಬಂಧಿಯಾಗಿ ಇಟ್ಟವೆ. ಹಿಂಗೆ ತಾ|| 11-4-1834ರಂದ್ ನಮ್ಮ ಕೊಡಗ್ ಜಿಲ್ಲೆಲಿ ಬ್ರಿಟಿಸರ ಆಡಳ್ತ ಸುರು ಆತ್. ಜೆನಗಳ ಮೆಲೆ ಅವರ ದಬ್ಬಾಳಿಕೆನೂ ಕೂಡಾ ಹೆಚ್ಚ್‌ಕಂಡ್ ಬಾತ್. ಬ್ರಿಟಿಸರ್ ಕೆಲ ದಿವಾನರ್‌ಗಳ ಸ್ವಾರ್ಥ ಆಸೆನ ಕಂಡ್ ಅವರ ತಮ್ಮ ಸೊಂತ ಲಾಭಕ್ಕಾಗಿ ಬಳ್ಸಿಕಂಡ್ ಜೆನಗಳ ಸಕ್ತಿ ಮತ್ತೆ ಒಗಟ್ಟ್‌ನ ಕಮ್ಮಿ ಮಾಡಿಕ್ಕಾಗಿ ಕೊಡಗ್‌ನ ಭಾಗನೆ ಆಗಿದ್ದ ಸುಳ್ಯ, ಪುತ್ತೂರು ಮತ್ತೆ ಬೆಳ್ಳಾರೆ ಸೀಮೆಗಳ 1834ನೇ ಅಕ್ಟೋಬರ್ ತಿಂಗಲಿ ದಕ್ಷಿಣ ಕನ್ನಡ ಜಿಲ್ಲೆಗೆ ವರ್ಗಾವಣೆ ಮಾಡುವೆ. ಜೆನಗಳಿಗೆ ಬ್ರಿಟಿಸರ ಈ ಕೆಲ್‌ಸ ಸೆರಿ ಕಂಡತ್‌ಲೆ, ಪ್ರಜೆಗೆ ತಮ್ಮ ಅರಸನ ಮೇಲೆ ಬಾಳ ಪ್ರೀತಿ ಮತ್ತೆ ವಿಸ್ವಾಸ ಇಟ್ಟ್‌ಕಂಡಿದ್ದೊ, ದಂಗೆನ ಗಟನೆಗೆ ಮೂಲ ಕಾರಣ ಸಾ ಇದೆ ಆತ್. ತಮ್ಮ ರಾಜನ ಬದ್ಲಿಗೆ ಬೇರೆ ಯಾರೋ ಬಂದ್ ಆಡಳ್ತ ನಡ್ಸುದು ಜೆನಗಳಿಗೆ ತೃಪ್ತಿ ಆತ್‌ಲೆ.

ಚಿಕ್ಕವೀರರಾಜನ, ಬ್ರಿಟಿಸರ್ ರಾಜಪದ್ವಿಂದ ತೆಗ್ದ ಮೇಲೆ ಸ್ವಾಮಿ ಅಪರಂಪಾರ ಮತ್ತೆ ಕಲ್ಯಾಣ ಸ್ವಾಮಿ, ಈ ಇಬ್ಬೊರು ಮುಖಂಡರ್‌ಗ ಹೋರಾಟ ಸುರು ಮಾಡಿಕೆ ಕಾರಣ ಹುಡ್ಕಿಕ್ಕಾಗಿ ಬ್ರಿಟಿಸ್‌ನವರೊಟ್ಟಿಗೆ ಸಿಂಹಾಸನದ ಹಕ್ಕ್‌ನ ಕೇಳಿವೆ. ಕೊಡಗ್‌ಲಿ ಕೆಲ ಪ್ರಮುಕರ್ ಬ್ರಿಟಿಸರ ಪರ ಇದ್ದ ಕಾರಣ ಈ ನಾಯಕರ್‌ಗ ದ. ಕನ್ನಡ ಜಿಲ್ಲೆನ ತಮ್ಮ ಕಾರ್ಯಸ್ಥಾನ ಆಗಿ ಮಾಡ್ಕಂಡೊ, ಇವರ ಗುಟ್ಟ್‌ಲಿ (ಗುಪ್ತಚಾರಿಕೆಂದ) ತಿಳ್ಕಂಡ ಬ್ರಿಟಿಸರ್ ಸ್ವಾಮಿ ಅಪರಂಪಾರ ಮತ್ತೆ ಕಲ್ಯಾಣ ಸ್ವಾಮಿನ 1837ರ್‌ಲಿ ದಸ್ತಗಿರಿ ಮಾಡಿವೆ. ಹಿಂಗೆ ಬಂಡಾಯದ ಮುಖ್ಯನಾಯಕರ್‌ಗ ಬಂಧನಲಿದ್ದರೂ ಕೂಡ ಈ ದಂಗೆನ ಉತ್ತರೋತ್ತರ ಬೆಳವಣಿಗೆನ ಕೀರ್ತಿ ಗುಡ್ಡೆಮನೆ ಅಪ್ಪಯ್ಯ ಗೌಡ್ರು, ಸುಳ್ಯದ ರಾಮುಗೌಡ್ರು, ಹುಲಿಕುಂದ ನಂಜಯ್ಯ ಮತ್ತೆ ಇನ್ನ್ ಕೆಲವುಕೆ ಸೇರ್ದೆ.

ನಾಯಕರ್‌ಗಳ ಬಂಧನಂದ ಬಂಡಾಯದ ಏರ್ಪಾಡ್‌ನ ಮೊಳ್ಕೆಲೇ ಜಂಟೆ ಹಾಕಿದಂಗ್ಹಾದೆ. ಇಂತ ಆಪತ್ತ್‌ನ ಸಮೆಲಿ ಹೆದ್‌ರಿ ಕುದ್ರದೆ ಅಪ್ಪಯ್ಯ ಗೌಡ್ರು, ಇನ್ ಬಾಕಿಯೊವೆಲ್ಲ ಬಂಡಾಯದ ಪೂರ್ತಿ ಹೊಣೆನ ಹೊತ್ಕಂಡೊ. ಶನಿವಾರ್‌ಸಂತೆ ಹಕ್ಕಲೆನ ಹೆಮ್ಮನಿ ಗ್ರಾಮದ ರೈತ ಪುಟ್ಟಬಸಪ್ಪನ ಕಲ್ಯಾಣ ಸ್ವಾಮಿನ್ಹಾಂಗೆ ನಟನೆ ಮಾಡಿಕೆ ಹೆಂಗಾರ್ ಮಾಡಿ ಒಪ್ಪಿಸಿ ಆತ್ ಜೆನ ಈಕೃತಕ 'ಕಲ್ಯಾಣ ಸ್ವಾಮಿ' ನ ಇವನೇ ಮುಂದೆ ಆವ ದೊರೆಂತ ನಂಬ್ಸಂಗೆ "ಕೆಣಿ" (ಉಪಾಯ) ಮಾಡ್ದೊ. ಅಪ್ಪಯ್ಯ ಗೌಡ್ರು ಈ ಸಂದರ್ಭಲಿ ಸುಭೇದಾರ ಆಗಿದ್ದೊ. ಕ್ರಾಂತಿ ದಳಲಿ ಶಿಸ್ತ್ ಮತ್ತೆ ನಿಯಮನ ಯವಸ್ತೆ ಮಾಡ್ದೊ. ಬಾಳಸ್ಟ್ ಸರ್ಕಾರಿ ಚಾಕಿರಿಲಿದ್ದ ಜೆನಗಳ್‌ನ ಈ ಬಂಡಾಯಲಿ, ಕೂಡಿ ನಮ್ಮ ಜಿಲ್ಲೆನ ಕಾಪಾಡಕುಂತೇಳಿ ವತ್ತಾಯ ಮಾಡಿ ಅವ್‌ಕೆಲ್ಲ ಧೈರ್ಯ ಕೊಟ್ಟ್ ದಂಗೆ ಎದ್ರಿಕೆ ಸೆರ್ಸಿದೊ. ಮತ್ತೆ ಬೇಕಸ್ಟ್ ಜೆನಗಳ ಬಂಡಾಯಲಿ ಒಟ್ಟ್

ಸೇರ್ಸಿಡೊ. ನೆಲ್ಜಿನ ಮಂಡಿರ ಉತ್ತಯ್ಯ, ಕಾಂತಳ್ಳಿನ ಮಲ್ಲಯ್ಯ, ಕುಕ್ಕನೂರು ಚೆನ್ನಯ್ಯ, ಇಂತ ಮಹಾ ಶೂರಂಗಳ ಕ್ರಾಂತಿಲಿ ಸೇರ್‌ಸಿ ಬ್ರಿಟಿಸರ ಇರುದ್ದ ಹೋರಾಟ ನಡ್ಸಿಕೆ ಒಪ್ಪಿಸಿವೆ. ಅಪ್ಪಯ್ಯ ಗೌಡ್ರು, ಚಿಕ್ಕವೀರರಾಜನ ಬ್ರಿಟಿಸರ್ ಜೈಲಿಗೆ ನೂಕಿದ್ಧಂಗೆ ಕಾಡ್‌ಲಿ ಅಡ್‌ಗಿ ಕಂಡಿದ್ದ ರಾಜನ ಭಕ್ತಂಗ್(ಆಗಿದ್ದ ಚೆಟ್ಟಿ ಮತ್ತೆ ಕುರ್ತ ಕುಡ್ಯಂತೇಳ್ವ ಮಹಾನ್ ಶೂರ ಅಣ್ಣತಮ್ಮಂಡ್ರ್‌ಬ್ಬರ್‌ನ ಗುರ್ತ ಹಿಡ್ದ್ ಅವರ ಸಾ ಕ್ರಾಂತಿಲಿ ಸೇರ್ಸಿಡೊ. ಬೇಂಗುನಾಡ್, ಎಡೆನಾಡ್, ತಾವುನಾಡ್ ನಾಲ್ಕ್‌ನಾಡ್ ಗ್ರಾಮಗಳಿಗೆ ಕುದ್ದಾಗಿ ಹೋದ ಅಪ್ಪಯ್ಯ ಗೌಡ್ರು, ಅಲ್ಲಿನ ಜೆನಗಳಿಗೆ ಸ್ಥಿತಿಗತಿನ ಕೆಬಿಗೆ ನಾಟ್‌ಪಂಗ್ ಲಾಯಿಕ್ ಹೇಳಿ ಅವರ್ಲಿ ಸ್ವಾತಂತ್ರ್ಯದ ಕಿಚ್ಚಿನ ಉರಿಪಂಗೆ ಮಾಡ್ಯೊ.

5–3-1837ರ ಶಿವರಾತ್ರೆ, ದಿನದಂದ್ ದಂಗೆ ಎದ್ರುದುಂತೇಳಿ ನಿಶ್ಚಯ ಆತ್. ಆದರೆ ದುರಾದೃಷ್ಟದಿಂದ ಈ ವರ್ತಮಾನ ದೇಶದ್ರೋಹಿ ಆಗಿದ್ದ ಸುಳ್ಯದ ಅಟ್ಲೂರು ರಾಮಪಯ್ಯಂಗೆ ಗೊತ್ತಾಗಿ ಅಂವ ಮಡಿಕೇರಿಲಿದ್ದ ಇವನ ಅಣ್ಣ ನಾರಾಯಣಂಗೆತಿಳ್ಸಿ ಬ್ರಿಟಿಸರ್ಗೆ ದಂಗೆ ಏಳ್‌ವ ಸುದ್ದಿ ಮುಟ್ಟಿಸಿದೆ. ಇದ್ ಗೊತ್ತಾದ ಕೂಡ್ಲೆ ಕ್ರಾತಿವೀರಂಗ ನಿಶ್ಚಯ ಮಾಡ್ದಸಮೆಕೆ ಮುಂದೆನೇ ದಂಗೆ ಎದ್ರಿಕೆ ಸುರು ಮಾಡಿ ಬುಟ್ಟವೆ. ಕೊಡಗ್‌ಲಿ ಗುಟ್ಟ್ ರಟ್ಟಾದರ್‌ಂದ ಕ್ರಾಂತಿವೀರಂಗ ದಕ್ಷಿಣ ಕಡೆಗೆ ದಂಡೆತ್ತಿ ಹೋದವೆ. ಕ್ರಾಂತಿವೀರರ ಸೈನ್ಯದ ಮುಖಂಡತ್ವನ ಅಪ್ಪಯ್ಯ ಗೌಡ್ರೆ ವಯಿಸಿಕಂಡವೆ, ಬ್ರಿಟಿಸರ್ ಇರುದ್ದ ದಂಗೆ ನಡ್ಸಿಕೆ ಹೊರ್ಟ ಕ್ರಾಂತಿವೀರರ ಸೈನ್ಯ ದೇಶದ್ರೋಹಿ ಅಟ್ಲೂರು ರಾಮಪ್ಪಯ್ಯನ ಕೊಂದ್ ಮುಂದ ಬೆಳ್ಳಾರೆ ಕೋಟೆನ ಹಿಡ್ದ್ ವೀರವೇಸಂದ ಹೋರಾಡಿ ಬಾರಿ ಬ್ರಿಟಿಸ್ ಸೈನ್ಯನ ಸೋಲ್ಸಿ ಬಾವುಟ ಗುಡ್ಡಲಿ ಬಾವುಟ ಹಾರ್ಸಿಡೊ. ಬ್ರಿಟಿಸ್ ಸೈನ್ಯ ಇವರ ಮುಂದೆ ಹೋರಾಡಿಕಾಗದೆ ಸೋತ್ ಹಿಮ್ಮೆಟ್ಟುವೆ ಈ ಕ್ರಾಂತಿ ಸೈನ್ಯದ ಸಂಖ್ಯೆ ಸುಮಾರ್ 12,000 ಇತ್‌ಂತತಿಳ್ದ್ ಬಂದಿದೆ. ಮಂಗ್ಳೂರ್‌ಲಿ ಬ್ರಿಟಿಸ್ ಸೈನ್ಯನ ಸೋಲ್ಸಿದ ಮೇಲೆ ಕೊಡಗ್‌ನ ಮುತ್ತ್‌ವ ವಿಚಾರಲಿ ಯವಸ್ತೆ ನಡ್ದೆದೆ. ಕೊಡಗ್‌ನ ಮುತ್ತ್‌ವ ಈ ಕ್ರಾಂತಿವೀರನ ಸೈನ್ಯಕ್ಕೆ ಅಪ್ಪಯ್ಯ ಗೌಡ್ರೆ ಮಹಾ ದಂಡನಾಯಕ ಆದವೆ. ಚೆಟ್ಟಿ ಕಂಡ್ಯ ಮತ್ತೆ ಕರ್ತ ಕುಡ್ಯ, ಮಂಡಿರ ಉತ್ತಯ್ಯ, ಕೂಜಿಗೋಡು ಮಲ್ಲಯ್ಯ ಗೌಡ್ರು ಈ ದಂಡ್‌ನ ಪ್ರಮುಖ ಸೇನಾನಿಗ ಆದವೆ.

ಅಪ್ಪಯ್ಯ ಗೌಡ್ರು ತನ್ನ ಸೈನ್ಯನ ಎರ್ಡ್ ಭಾಗ ಮಾಡಿ ಒಂದರ ಸಂಪಾಜೆ ಹಾದಿಲಿ ಕಳ್ಸಿ ತಾನ್ ಇನ್ನೊಂದ್ ವಿಭಾಗ ಜೊಟ್ಟೆಗೆ ಬಿಸಿಲೇ ಘಾಟ್‌ನ ದಾಟಿಬಂದವೆ ಈ ಸಂಗತಿ ಲೀಹಾರ್ಗಿ ಗೊತ್ತಾಗಿ ಅಂವ ಹೆದ್‌ರಿ ಜಾಸ್ತಿ ಸೈನಿಕಂಗ ಇರ್ವ 19ನೇ ರೆಜಿಮೆಂಟ್‌ನ ಫ್ರೆಂಚ್ ರಾಕ್ಸ್‌ಂದ ತರ್ಸಿಕಣ್ಡೆ. ಲೀಹಾರ್ಡಿ ಈ ಸೈನ್ಯನ ಎರ್ಡ್ ವಿಭಾಗ ಮಾಡಿ ಬ್ರಿಟಿಸರ ದಿವಾನಗ ಆದ ಬೋಪಣ್ಣ ಮತ್ತೆ ಪೊನ್ನಪ್ಪ ಇವರಿಬ್ಬರ್‌ನ ಆ ಗುಂಪುನೊಟ್ಟೆಗೆ ಕಳ್ಸಿದೆ. ಬೋಪಣ್ಣ ದಿವಾನ ಸಂಪಾಜೆಗೆ ಹೋದೆ, ಪೊನ್ನಪ್ಪ ದಿವಾನ ಬೆಸಿಲೇ ಘಾಟಿಗೆ ಹೋದೆ, ಅಪ್ಪಯ್ಯಗೌಡ್ರ ಸೈನ್ಯ ಬಾವಸ್ಟರ್‌ಲಿ ಬಿಸಿಲೆ ಘಾಟ್‌ನ ಸುಭೇದಾರ ಅಪ್ಪಚ್ಚನ ಸೋಲ್ಸಿ ಹದ್ದ್ ದಾಟಿ (ಗಡಿ) ಇಚೆಗೆ ಬಂದಿದ್ದದೆ. ಈ ದಂಗೆಲಿ ಉತ್ತರ ಕೊಡಗ್‌ನ ಸಾಕಸ್ಟ್ ಜೆನ ಕೂಡಿದ್ದವೆ. ಆದರೆ ಭಾರಿ ಭಾರಿ ಹೊಸಸ ಆಯಿಧಗಳಿಂದ ಕೂಡಿದ್ದ ಬ್ರಿಟಿಸ್ ಸೈನ್ಯನ ನೋಡಿ ಬಾಳಸ್ಟ್ ರೈತಂಗ ಹೆದ್‌ರಿ ದಂಗೆನ ಬುಟ್ಟಿ ಹೋವುಟವೆ. ಕ್ರಾಂತಿ ಯೋಧಂಗ ಮಾತ್ರ ಕಡೆ ಉಸ್ರ್ ಇರ್ವವರೆಗೆ ಹೋರಾಡುವೆ ಭೂಮಿ ತಾಯಿಗೆ ರಕ್ತ ಸುರ್ಸಿವೆ, ಬ್ರಿಟಿಸರ ಭಾರಿ ಸೈನ್ಯದ ಮುಂದೆ ಕ್ರಾಂತಿ ವೀರರ ಸೈನ್ಯ ಸೋತೊದೆ. ಸಾಕಸ್ಟ್ ಕ್ರಾಂತಿ ವೀರಂಗ ಬ್ರಿಟಿಸರ ಸೈನ್ಯಕ್ಕೆ ಸೆರೆ ಸಿಕ್ಕಿವೆ. ಸೈನ್ಯ ಸೋತಮೇಲೆ ದಿಕ್ಕ್ ಕಾಣದ ಅಪ್ಪಯ್ಯಗೌಡ್ರು ತೊಪ್ಪಿಸಿಕೊಂಡ್ ಸುಬ್ರಮಣ್ಯಕ್ಕೆ ಮುಟ್ಟಿ ಬಾವಸ್ರಲಿ ಇನ್ನೊಂದು ಬೀಕರ ಸುದ್ದಿ ಇವರ ದಿಕ್ ಕೆಡಿಸಿದೆ. ಅಲ್ಲಿ ಸಾ ಬ್ರಿಟಿಸರ ದೊಡ್ಡ ಸೈನ್ಯ ಧಾರವಾಡ ಕಲ್ಲಿಕೋಟೆ, ಬೊಂಬಾಯಿ ಕಡೆಗಳ್‌ಂದ ಎವರೆಸ್ಟ್ ಮತ್ತೆ ಗ್ರೀನ್‌ನ ನಾಯಕತ್ವಲಿ ಬಂದ್ (ಈ ಸೈನ್ಯಲಿ ಸುಮಾರ್ 3,000 ಜೆನ ಸೈನಿಕರ್ ಇದ್ದವೆ) ಮಂಗ್ಳೂರ್‌ನ ಆಕ್ರಮಿಸಿಕಂಡವೆ. ಸೈನ್ಯದ ಮುಖ್ಯ ಭಾಗನ ಕೊಡಗ್‌ಗೆ ಕಳ್ಸಿದರ್‌ಂದ ರಾಮಗೌಡ್ರ ಸೋಲು ಅನಿವಾರ್ಯ ಆತ್. ಮಡಿಕೇರಿ ಮೇಲೆ ದಾಳಿ ಮಾಡ್ದ ಅಪ್ಪಯ್ಯ ಗೌಡ್ರ ಸೈನ್ಯ ಮಡಿಕೇರಿಂದ ಬೆರಿ ನಾಕ್ ಮೈಲಿ ದೂರಲಿತ್ತ್. ಈ ಹೋರಾಟಲಿ ಸಾ ಸೋತ ಮೇಲೆ ಮುಖಂಡರ್ ತೊಪ್ಪಿಸಿಕಂಡವೆ. ಬ್ರಿಟಿಸರ್ ತೊಪ್ಪಿಸಿಕಂಡ ಮುಖಂಡರ್‌ಗಳ ಹಿಡ್ದ್ ಕೊಟ್ಟವುಕೆ 10,000 ರೂಪ್ಯಾ ಬೋಮಾನ ಕೊಟ್ಟವೇಂತ ಸಾರ್ದೊ, ಆಗಳೇ ಬ್ರಿಟಿಸರ್ ಮುಖಂಡರ್‌ಗಳ ಹಿಡ್ದ್ ಕೊಟ್ಟವುಕೆ 10,000 ರೂಪ್ಯಾ ಬೋಮಾನ ಸಾರ್ದ್ ನೋಡ್ರೆ ಈ ವೀರರ ಹೋರಾಟದ ಮಹತ್ವ ಏನೆಂತೇಳ್ದ್ ಅರ್ತಾದೆ. ಈ ದಂಗೆಲಿ ಬೇಕಸ್ಟ್ ಜೆನ ಯೋಧರ ರಕ್ತ ಚೆಲ್ಲಿ ಭೂಮಿತಾಯಿಗೆ ಅಭಿಸೇಕ ಆತ್ ಸೈನ್ಯ ಸೋತಮೇಲೆ ನಾನ್ ಬ್ರಿಟಿಸರ್ಗೆ ಹೆದ್ರಿ ಅಂಡ್ಗುದು ಯಾಕೆ?

–ಸೂದನ ಎಸ್. ಈರಪ್ಪ, ಪಾಲೂರು

(ಮುಂದಿನ ಸಂಚಿಕೆ ನೋಡಿ)

ಚೆನ್ನಿ ಗೂಡೆ

ಚೆನ್ನಿ ಗೂಡೆ ಹೆತ್ತುಟು ! ಹೆರಿಗೆ ಸಮಯಲಿ ಕಿರ್‍ಚಾಡಿ, ಬೊಬ್ಬೆಹಾಕಿ ರಂಪ ಮಾಡಿ ಅಂತೂ ಹೆರಿಗೆ ಆತ್. ಅದೂ ಮನೇಲಿ ಹೆತ್ತದ್, ಆಸ್ಪತ್ರೆ ಗೀಸ್ಪತ್ರೆಂತ ಸುತ್ತಾಡ್ತ್‌ಲೆ. ಯಾಕೆಂತೇಳಿರೆ ಅಲ್ಲಿ ಮಾತೆತ್ತಿರೆ ಆಫರೇಷನ್ ! ಕೂಸು ತಿರ್‍ಗಿತ್‌ಲಿ ಹಂಗೆ ಉಟ್ಟ್ಕ ಹಿಂಗೆ ಉಟ್ಟ್ಕತೇಳಿ ಮಂಗಮಾಡಿ ದುಡ್‌ಎಳಿಯೊಕೆ ನೋಡ್‌ವೆ "ನಾನಂತು ಸೊಸೆನ ಆಸ್ಪತ್ರೆಗೆ ಮಾತ್ರ ಸೇರ್‍ಸುದ್‌ಲೇಂತ" ಅತ್ತೆದ್ ಹಠ ! ಹಾಂಗಾಗಿ ಚೆನ್ನಿ ಗೂಡೆ ಮನೇಲಿ ಹೆರಿಕಾತ್.

ಚೆನ್ನಿಗೂಡೆ ಒಂದ್ ವಾರದ ಹಸೀ ಬಾಣಂತಿ. ಕೂಸ್ನ್ ನೋಡ್ರೆ ಇದ್ ಯಂತದೊಂದು ಪ್ರಾಣೀಂತ ಒಂಥರಾ ಮುಖ ಮಾಡಿಕಂಡದೆ. ಅದ್ಕೆ ಹಾಲ್ ಕುಡ್ಸುದ್ ಹೆಂಗೆ, ಕೂಸ್ನ ಎತ್ತಿಕಂಬದ್ ಹೆಂಗೆ, ಮಲಗ್ಸಿಕಂಬೊದ್ ಹೆಂಗೇಂತ ಗೊತ್ತುಟಾ ? ಕೂಸು ಮರ್ಟರೆಮನಿ ಇವ್ಳ್ಳ ಸಹ ಮರ್ಟ್‌ಕಂಬೊದು ! ಅದ್ನ ಸಮಾಧಾನ ಮಾಡಿಕೂ ಗೊತ್ತ್‌ಲೆ. ಕೂಸೇನಾರ್ ಹಾಸಿಗೆ 'ಮೆತ್ತಂಗೆ' ಮಾಡಿಕಂಡ್ರೆ ಅಯ್ಯೊಯ್ಯೋಂತೇಳ್ದೆ. ಅದಿರ್ಲಿ ಅದೇನಾರ್ ಹೇತ್‌ಕಂಡ್ರಂತೂ ಮೂಗ್ ಮುಚ್ಚಿಕಂಡ್ ನೋಡ್ದೆ. ಥತ್‌ತೇರಿಕೆ ಇನ್ನೂ ಈ ಕೂಸು ಅನ್ನ ತಿಂಬಕೆ ಸುರ್ ಮಾಡ್ತ್‌ಲೆ. ಬರೀ ಹಾಲ್ ಕುಡ್ಪದಕ್ಕೆ ಹಿಂಗೆ ಹೇತರೆ ಇನ್ ಅನ್ನ ತಿಂಬಕೆ ಸುರು ಮಾಡಿರೆ ಹಾಸಿಗೇನೇ ಕಕ್ಕಸ್‌ಮನೆ ಮಾಡಿಕಂಡರೆ ನಾಎನ್ ಮಾಡ್ದು ? ಇದೆಲ್ಲಾ ಯಾಕೆ ಬೇಕಿತ್? ಹಾ ಶಿವ್ನೆಂತ ಮರ್ಟ್‌ಕಂಡದೆ ! ನಿಜ ಹೇಳೊಕ್‌ಂತೇಳಿರೆ ಚೆನ್ನಿ ಗೂಡೆಗೆ ಏನೂ ಗೊತ್‌ಲೆ. ಅವ್ಳ ಸೀರೆ ಉಡ್ಪ ಪೊರ್ಲ್ ನೋಡೊಕು. ಕಂಬಕೆ ಬಟ್ಟೆ ಸುತ್ತುವೆಲ್ಲಾ ಹಾಂಗೆ ಸೀರೆನ ಸುತ್ತಿ ಕಂಬಕೆ ಗೊತುಟ್ಟಿಲ್ಲದೆ ನೆರಿಗೆ ಮಾಡಿಕ್ಕಾಗಲಿ, ಸೆರಗ್ ಹಾಕಿಕಂಬಕ್ಕಾಗಲಿ ಗೊತ್‌ಲೆ

ಪಾಪ ಚೆನ್ನಿದ್ ತಪ್ಪಲ್ಲ. ಅವ್ಳ ಅಪ್ಪ ಅವ್ವ ಮಾಡ್ದ್ ತಪ್ಪ್. ಚೆನ್ನಿಆಡಿಕಂಡಿದ್ದ ಗೂಡೆ. ಹದಿನೈದ್ ಹದಿನಾರ್ ವರ್ಷದ ಗೂಡೆ. ಯಾರೋ 'ತಂದ್' ಬಂದೊಳೊ. ಈಗ ಲಗ್ನ ಕೂಡಿ ಬಂದುಟ್ಟ್ಕ. ಈಗಳೇ ಲಗ್ನ ಮಾಡದೆ ಹೋದ್ರೆ ಇನ್ ಮೂವತ್ತೋ ನಲ್ವತ್ತೋ ವರ್ಷಕ್ಕೇ ಲಗ್ನಾಂತ ಯಾರೋ "ತಲೆ ಕೆಟ್ಟವು" ಹೇಳ್ದೋಗಡೆ. ಸ್ವಂತ ಮೆದುಳು ಇಲ್ಲದ ಈ ಅಪ್ಪ-ಅವ್ವ ಅದೇ ಸೈಂತ ಒಪ್ಪಿಕಂಡೋ. ಗೂಡೆನ ಬೇಗ ದಾಟ್ಸಿಬುಡುದೇ ಒಳ್ಳೆದ್‌ತ ಗ್ಯಾನ ಮಾಡ್ದೊ. ಹಿಡ್ದ್ ಮೊದುವೆ ಮಾಡಿಕೊಟ್ಟೊ. ಅದಾ ತಕಣೆ ಈಗ ಗೂಡೆದ್ ಪರ್‍ಪಾಟನ ಯಾರೊಟ್ಟೆಗೆ ಹೇಳ್ದು?

ಹಳ್ಳಿಲಿ ಬಾಣಂತಿ ಮಾತಾಡ್ಸಿಕೇಂತ ಬಂದವೆ. ಹಾಂಗೆ ದಿನಕ್ಕೆ ಕಮ್ಮಿತೇಳಿರೆ ಮೂರ್‌ನಾಕ್‌ಹೆಂಗ್ಸುಗ ಬಂದವೆ. ಬಂದವು "ಹಿಂಗೆಲ್ಲ ಹಾಂಗೆ, ಹಾಂಗೆಲ್ಲ ಹಿಂಗೆಂತ ಚೆನ್ನಿಗೆ ಬುದ್ಧಿ ಹೇಳ್ತಾ ಇದ್ದವೆ. ಚೆನ್ನಿದ್ ಅತ್ತೆ ಸ್ವಲ್ಪ ಚುರುಕ್ ಉಟ್ಟ್ಕ. ಬಂದವ್ಳ ಸುಧಾರ್‍ಸಿಬುಟ್ಟದೆ. ಬಂದವು ಕಾಫಿ-ಗೀಫಿ ಕುಡ್ದ್, ಎಲೆ ಅಡಿಕೆ ತಿಂದ್, ಅಂಗಳ ತುಂಬಾ ಉಗ್ದ್ ಹೋದವೆ. ಚೆನ್ನಿದ್ ಮಾಂಪ ಮೂಲೆಲೆ.

ಒಂದಿನ ಚೆನ್ನಿ ತಿಂಬೊದರ್ಲಿ ಸ್ವಲ್ಪ ಹೆಚ್‌ಕಮ್ಮಿ ಮಾಡಿಬುಡ್ತ್. ತಿಂದ್‌ಕಂಡಿದ್ದ ಬಾಯಿನೋಡಿ. ಇವ್ಳಿಗೆ ಬಾಯಿಕಟ್ಟೆಕಾತ್‌ಲೆ. ಜರಸುರಾತ್. ಅದೂ ಸಳಿಜರ ! ಅಯ್ಯೋ ಹಿಂಗಾತಲೇಂತ ಅತ್ತೆ ತಲೆ ಬಿಸಿ ಮಾಡಿಕಂಡ್ ಕಂಡಕಂಡ ದೇವ್ರಿಗೆ ಹರಿಕೆ ಮಾಡ್ತ್. ಯಾವುಯಾವ್ದೋ ಮದ್ ಮಾಡ್ತ್. ಚೆನ್ನಿಗೆ ಸೊಯನೇ ಇಲ್ಲೆ !! ಅವ್ಳ ಅಪ್ಪನೂ ಬಾತ್‌ಲೆ, ಅವ್ವನೂ ಬಾತ್‌ಲೆ. ಅತ್ತೆಗೆ ತಕಪುಕು ಸುರಾತ್. ಎಲ್ಲಾರ್ ಸೊಸೆ ಸತ್‌ಗಿತ್ ಹೋದರೆ ಏನ್ ಮಾಡ್ದು ? ಕೂಸು ತಬ್ಬಲಿ ಆಗಿಬುಡ್ದಲೆ. ಅದ್ ಬೇರೆ ಗಂಡ್ ಕೂಸು. ಅಯ್ಯೋ ಗಂಡೋ ಹೆಣ್ಣೋ. ಆದ್ ಯಾವುದಾದ್ರೇನ್. ಎಲ್ಲಾ ಒಂದೇ. ಅಂತೂ ಕೂಸ್ನ ತಬ್ಬಲಿ ಮಾಡಕೆ 'ಬುಡಿಕಿಲೆಂತ ಚನ್ನಪ್ಪಣ್ಣನ ಮನೇಗೆ ಅತ್ತೆ ಓಡ್ತ್. . ಹಿಂಗೆ ಹಿಂಗೆ ಆಗೋಗ್‌ಟು ಒಮ್ಮೆ ಜೀಪ್ ತಕಬಾ. ಎಟ್ಟಾರೂ ಆಗ್ಲಿ. ಒಮ್ಮೆ ಆಸ್ಪತ್ರೆಗೆ ಪೋಯೀಂತೇಳಿ ಸೊಸೆನ ಆಸ್ಪತ್ರೆಗೆ ಕರ್‌ಕಂಡ್ ಹೋತು. ಆಬ್ಬಾ ! ಸಧ್ಯ ಚೆನ್ನಿಗೂಡೆನ ಜೀವ ಉಳ್ತ್.

ಇತ್ತ ಗಂಡ ಹೆಂಗುಟ್ಟ್ಕತ ನಾ ಹೇಳ್ತ್‌ಲೆ ಅಂವ ಆರೆಪಿರಾಂದ ! ಅವಂಗೆ ಜವಾಬ್ದಾರಿಂತೇಳ್ದು ಇಲ್ಲೆ. ತೊಂಬೆ ತೇಲುವಷ್ಟು ಕುಡ್ದದೆ. ಈಗಂತೂ ಈ ಬೈನೆ ಕಳ್ಳುಬೇರೆ ಸುರಾಗುಟು. ಬೆಳಿಗ್ಗೆ ಎದ್ದರೆ ಶಿವ ಶಿವಾಂತೇಳಿಕಂಡ್ ಸೀದಾ ಬೈನೆ ಬುಡಕ್ಕೆ ಹೋದೆ. ಹೊಟ್ಟೆತುಂಬ ಕುಡಿಯೋದು. ಅರ್ಧಗಂಟೆ ಬಯ್ಯೋದ್. ಮಧ್ಯಾಹ್ನ ಹೊತ್ತಿಗೆಲ್ಲಾ ಜೂಂಗಿ ಕಂಡೇ ಇದ್ದದೆ. ಸಾಯಂಕಾಲ ಆತೋ ಇಲ್ಲೆಯೋ ಪುನಃ ಹೋದು ಬೈನೆ ಬುಡಕ್ಕೆ. ಹೆಣ್ಣಿಗೇನಾರ್ ಮದ್ ತಂದ್‌ಕೊಡನೋ, ಕೂಸ್‌ಗೇನಾರ್ ಕಷ್ಟ ಆದು. ಅದ್ ಯಾವ್ದೂ ಗ್ಯಾನ ಇಲ್ಲದ ಗಂಡ. ಚೆನ್ನಿ ಪಾಲಿಗೆ ಅಂವೊಬ್ಬ ಗಂಡಲ್ಲ, ಬರೀ ದಂಡ !

ಅಪ್ಪನೂ ಬಾತ್‌ಲೆ, ಅವ್ವನೂ ಬಾತ್‌ಲೆ, ಗಂಡನೂ ಹಿಂಗೆ. ಸಂಸಾರನ ಹೆಂಗೆ ನಿಭಾಯ್ಸೋಕುಂತೇನಾರ್ . ಚೆನ್ನಿಗೆ ಗೊತ್ತುಟಾ? ಅದೇನೋ ಕಷ್ಟಗಾರ್‍ತಿ ಅತ್ತೆ ಆದಕ್ಕೆ ಆತ್. ಇಲ್ಲರೆ? ನೀವ್ ಏನೇ ಹೇಳಿ ಗೂಡೆನ ಮೊದುವೆ ಮಾಡೊಕೊರೆ ಕಮ್ಮಿತೇಳಿರೆ ಇಪ್ಪತ್ ವರ್ಷನಾರ್ ಆಕು.

'ಮರನೋಡಿ ಬಳ್ಳಿ ಬುಡು'ಂತ ಹೇಳ್ವಂಗೆ ಬಳ್ಳಿ ಗಂಡನ್ನ ನೋಡಿ ಮೊದುವೆ ಮಾಡೋಕು.

-ಬಿ.ಆರ್. ಜೋಯಪ್ಪ, ಮದೆ.

ನಂಗೇಕೆ ಈ ಕರೆ

ಸಾವಿರಾರ್ ಬಾಸೆ ಈ ಪ್ರಪಂಚಲಿ ಗಡ
ಅದರ್ಲಿ ನಮ್ಮದ್ ಒಂದು ಬಾಸೆ ಗಡ

ನಾನಿರುದು ನೋಡಿ ಅಲ್ಲಿ - ಆ ಹೊಳೆಕರೆ
ಕೆಲ್ಸ ನಂದ್ ಇಲ್ಲಿ ನೋಡಿ - ಈ ಗದ್ದೆ ಮೇಲೆ

ಹರ್ಡಿನೆ ಗೊಬ್ಬರ – ಬಿತ್ತಿನೆ ಬೀಜ
ಹೂಡ್ನೆ–ನೆಟ್ಟನೆ-ಕೊಯಿದನೆ-ಹೊತ್ತನೆ

ಹೊಡ್ಡನೆ ಕಳಲಿ ತೆಗ್ಗನೆ ಬತ್ತ
ಕಟ್ಟನೆ ಅಟ್ಟದ್ ಕಡಿಕೆಲಿ ತುಂಬಾ

ಇದ್ ಬುಟ್ಟರೆ ಮತ್ತೆ ನಂಗಿನ್ನೇನ್ ಕೆಲ್ಸ ?
ಹೊಳೆಗೋಗಿ ಮುಳ್ಗಿ ಹಿಡ್ದನೆ ಮೀನ್

ಕಾಡಿಗೋಗಿ ಹೊತ್ತನೆ ವಾಟೆದ್ ಕಟ್ಟ್
ಮಾಡ್ನೆ ಅದರ್ಲಿ ಪೊಡ, ಗೋರ್ಗ,ಗೋರಿ ತಟ್ಟ

ಮಳೆ ಬಾಕನ ಒಡ್ನೆ ಕೂಳಿ–ಪೊಡ–ಹೊತ್ಕಂಡ್
ಗೋರಿ ತುಂಬಾ ಮೀನ್ ತನ್ನೆ ಜೋರ್ ಸಳಿ ಹಿಡ್ಕಂಡ್

ಕುದ್ದನೆ ಸುಟ್ಕಂಡ್ ಒಲೆ ಬುಡಲಿ ಮೀನ್
ಎದ್ದನೆ ಮತ್ತೆ ಬಿಸಿ ಹತ್ತ್ಕನ ಬೆನ್ನ್

ಹಿಂಗೇ ಕಳ್ದದೆ ನೋಡಿ ನನ್ನ ಬಾಳ್
ಕುಶಿ ನಂಗೆ ಬಾರಿ ಈ ಗಾಳಿ ಮಳೆಗಾಲ

ಹಿಂಗಿರ್ವ ನನ್ನನಾ ನೀವೇಕೆ ಪೀಡ್ಸಿರೆ ?
ಕತೆ ಬರಿ, ಪದ ಬರಿ, ಸೋಬಾನೆತೇಳಿ

ಅಯ್ಯೋ ದ್ಯಾವರೇ ನಂಗೇಕೆ ಈ ಕರೆ
ಬುಡಿ ನನ್ನ ಪಾಡಿಗೆ ನಾನಿದ್ದನೆ ಹಿಂಗೇ

— ಪಿ. ಡಿ. ಬೋಪಯ್ಯ, ಬಲಮುರಿ

ಚಂದಾ ವಿವರ

ಬಿಡಿ ಪ್ರತಿ	:	5 ರೂ.
ಅರ್ಧ ವಾರ್ಷಿಕ್ಕೆ	:	60 ರೂ.
ವಾರ್ಷಿಕ ಚಂದಾ	:	120 ರೂ.

ಮೈಸೂರು ವಿಭಾಗ
ನಿವೃತ್ತ ಸೈನಿಕರ ಸಂಘ (ರಿ)

ಇ. ಸಂ. 338/98-97 ಮೈಸೂರು.

.... ಸಂಘದ ಉದ್ದೇಶಗಳು ....



1. ಮಾಜಿ ಸೈನಿಕರಿಗೆ ನಿವೇಶನ ಒದಗಿಸುವುದು
2. ಮಾಜಿ ಸೈನಿಕರ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡುವುದು
3. ಮೃತ ಸೈನಿಕರ ಅವಲಂಬಿತರಿಗೆ ಮರಣ ಪರಿಹಾರವಾಗಿ ಧನ ಸಹಾಯ ನೀಡುವುದು.
4. ಮಾಜಿ ಸೈನಿಕರ ರ್ಯಾಂಕ್ ವಿಜೇತ ಮಕ್ಕಳಿಗೆ ಪ್ರೋತ್ಸಾಹ ಧನ ಸಹಾಯ ನೀಡುವುದು
5. ಅರ್ಹ ಮಾಜಿ ಸೈನಿಕರಿಗೆ ನ್ಯಾಯಬೆಲೆ ಅಂಗಡಿ/ಸೀಮೆ ಎಣ್ಣೆ ಅಂಗಡಿ ಒದಗಿಸುವಲ್ಲಿ ನೆರವಾಗುವುದು
6. ಮಾಜಿ ಸೈನಿಕರ ಪ್ರತಿಭಾವಂತ ಕ್ರೀಡಾಪಟುಗಳಿಗೆ ಉತ್ತೇಜನ ಹಾಗೂ ಪ್ರೋತ್ಸಾಹ, ಧನಸಹಾಯ ನೀಡುವುದು.

ಮತ್ತು ಮಾಜಿ ಸೈನಿಕರ ಎಲ್ಲಾ ತರಹದ ಕುಂದು ಕೊರತೆಗಳ ನಿವಾರಣೆಗಾಗಿ ಹಾಗೂ ಸರ್ಕಾರದಿಂದ ಲಭ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಹೋರಾಡಿ ನ್ಯಾಯ ದೊರಕಿಸಲು ಸಹಕರಿಸುವುದು.

ಹೆಚ್ಚಿನ ವಿವರಗಳಿಗಾಗಿ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಲು ಕೋರಲಾಗಿದೆ.

ಕಾರ್ಯದರ್ಶಿಗಳು,
ಮೈಸೂರು ವಿಭಾಗ ನಿವೃತ್ತ ಮಾಜಿ ಸೈನಿಕರ ಸಂಘ (ರಿ)
ಸಿಲ್ಕ್ ಫ್ಯಾಕ್ಟ್ರಿ ಸರ್ಕಲ್, ನಂ. 11, ಚರ್ಚ್ ಕಾಂಪ್ಲೆಕ್ಸ್, ಮೈಸೂರು-570008.

Edited, Published and Owner by PATTADA. P. SHEELAMANI, Published at No. 322, Bogadi Circle, Hinkal Post, Mysore-570017.
Printed at ASHIRWAD PRINTERS, 180/A, 6th Main, Vinayakanagar, Mysore-570012.